ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ Chilume Circulated in and around 10 countries ಸಂಚಿಕೆ ೧೦, ಮಾರ್ಚ್ ೨೦೧೪

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಈಗಿನ ಸುದ್ದಿ ... ಪು. ೧
ಸಂಪಾದಕೀಯ ... ಪು. ೨
ಆರೋಗ್ಯ ...ಪು. ೪

ಚಿಲುಮೆಯ ಒಳಗೆ

ನಾ. ಕಸ್ತೂರಿ ಬಗ್ಗೆ ಲೇಖನ ... ಪು.೫
ರಾಂ ರಾಮ! ಹಾಸ್ಯ ... ಪು. ೯
ಕಥಾ ಚಿಲುಮೆ ... ಪು. ೧೧

ಚಿಲುಮೆಯ ಒಳಗೆ

ರೆಸಿಪಿ ಕೊಡ್ತೀರಾ! ... ಪು. ೧೧
ಕಾವ್ಯ ಚಿಲುಮೆ ... ಪು. ೧೨
ಹಾಸ್ಯ ಚಿಲುಮೆ ... ಪು. ೧೨

ಚಿಲುಮೆಯ ಒಳಗೆ

ಸಕಲ ಕಲಾ ವಲ್ಲಭೆ ... ಪು. ೧೩
ಪದ ಪುಂಜ ... ಪು. ೧೪
ರಂಗೋಲಿ ... ಪು. ೧೪

ಚಿಲುಮೆಯ ಒಳಗೆ

ಸೈಕಲ್ ಪಯಣ ... ಪು. ೧೫
ವಿಜ್ಞಾನ ... ಪು. ೧೮
ಅಲ್ಲಲ್ಲಿ ಏನೇನು ... ಪು. ೧೯

ಚಿಲುಮೆಯ ಒಳಗೆ

ಮುಂದೆರಡು ತಿಂಗಳ ಪ್ರಮುಖ ದಿನಗಳು ಪುಟ ೩ ರಲ್ಲಿ ...

ಈಗಿನ ಸುದ್ದಿ

ಪಾರಾಮಟ ಕನ್ನಡ ಶಾಲೆ - ವರದಿ

ಚಿಕ್ಕ ಪುಟ್ಟ ಪುಟಾಣಿಗಳು ಪಾಟೀ-ಚೀಲ ಹೊತ್ತು ವಾರಾಂತ್ಯದ ಹುಟ್ಟು ಹಬ್ಬದ ಪಾರ್ಟಿ, ಇನ್ನಿತರ ಕಾರ್ಯಕ್ರಮಗಳನ್ನು ಮುಗಿಸಿಕೊಂಡು ಭಾನುವಾರ ಸಂಜೆ ಕನ್ನಡ ಶಾಲೆಗೆ ಬರುವುದ ನೋಡಿದ ಯಾರಿಗೇ ಆದರೂ ಸಂತೋಷ ಆಗುತ್ತೆ. ಈ ರೀತಿಯ ಶಾಲೆ ಎಲ್ಲಿ ನಡೆಯುತ್ತದೆ ಎಂದು ಕುತೂಹಲವಾಗುತ್ತಿದೆಯೇ? ಸಿಡ್ನಿಯ ಲಿವರ್ಪೂಲ್, ಪಾರಾಮಟ ಮತ್ತು ಎಪ್ಪಿಂಗ್ ನಲ್ಲಿ, ಪ್ರತೀ ಶನಿವಾರ ಮತ್ತು ಭಾನುವಾರ ಎರಡು ಗಂಟೆಗಳ ಕಾಲ ನಡೆಯುವ ಕನ್ನಡ ಶಾಲೆ.

ಆಸ್ಟ್ರೇಲಿಯಾಗೆ ಬಂದು ನೆಲೆಸಿದ ಪೋಷಕರು, ಅವರ ಮುದ್ದು ಮಕ್ಕಳ ಬಾಯಲ್ಲಿ ತಮ್ಮ ಮಾತೃಭಾಷೆ ಕನ್ನಡದ ಶಬ್ದ ಕೇಳಲು ಪರಿತಪಿಸುವುದಿಲ್ಲವೇ. ಮನೆಯಲ್ಲಿ ಅಪ್ಪ ಅಮ್ಮ ಎಷ್ಟೇ ಕನ್ನಡದಲ್ಲಿ ಮಾತಾಡಿಸಿದರೂ, ಹೊರಗಿನ ಆಂಗ್ಲ ಜಗತ್ತು ಬಹಳ ಪ್ರಬಲವಾಗಿದೆ. ಮಕ್ಕಳು, ಅಪ್ಪ ಅಮ್ಮನಿಗೇ ಇಂಗ್ಲಿಷ್ ಹೇಳಿಕೊಡಲು ಮುಂದಾಗುತ್ತಾರೆ. ಹಿತ್ತಲ ಗಿಡ ಮದ್ದಲ್ಲ ಎಂಬ ನಾಣ್ನುಡಿ ಇಲ್ಲಿ ನೆನೆಸಿಕೊಳ್ಳಲೇ ಬೇಕು. ಅಪ್ಪ ಅಮ್ಮನ ಪಾಠ, ಮಕ್ಕಳ ತಲೆ ಒಳಗೆ ಇಳಿಯುವುದು ಕಷ್ಟವೇ. ಈ ಕಾರಣದಿಂದಲೇ ಮಕ್ಕಳು ಶಾಲೆಗೇ ಹೋಗಿ ಬೇರೆ ಮಕ್ಕಳ ಜೊತೆ ಬೆರೆತು, ಗುರುಗಳಿಂದ ಕಲಿಯುವುದು ಹೆಚ್ಚು ಸೂಕ್ತ!!

ಪಾರಾಮಟ ಕನ್ನಡ ಶಾಲೆಯ ಆಟ ಪಾಠಗಳ ಬಗ್ಗೆ ಒಂದು ಕಿರುನೋಟ ಬೀರೋಣವೇ? ಈ ಶಾಲೆ ೨೭೧ ಓಲ್ಡ್ ವಿಂಡ್ಸರ್ ರಸ್ತೆಯಲ್ಲಿರುವ ಶಕ್ತಿ ದೇವಸ್ಥಾನದ ಆವರಣದಲ್ಲಿ ಪ್ರತಿ ಭಾನುವಾರ ಸಂಜೆ ೩-೩೦ ಯಿಂದ ೫ ಗಂಟೆಯ ವರೆಗೆ ನಡೆಯುತ್ತದೆ. ದೇವಸ್ಥಾನದ ಸಮಯ ಸಂಜೆ ಐದು ಗಂಟೆಯ ಮೇಲಾದ್ದರಿಂದ, ಶಾಲೆಗೆ ಬಿಡಲು ಬರುವ ಪೋಷಕರಿಗೆ ಕಾರ್ ನಿಲ್ಲಿಸಲು ಜಾಗದ ವ್ಯವಸ್ತೆ ಇದೆ. ಈ ಶಾಲೆಗೆ ಸುಮಾರು ೧೦-೧೫ ಮಕ್ಕಳು ಬರುತ್ತಾರೆ. ಮೂವರು ಅಧ್ಯಾಪಕರು ಇದ್ದಾರೆ. ನಾಲ್ಕರಿಂದ ಆರು ವರ್ಷದ ಒಳಗಿರುವ ಮಕ್ಕಳಿಗೆ ಒಬ್ಬ ಗುರುಗಳು. ಮತ್ತು ದೊಡ್ಡ ಮಕ್ಕಳಿಗೆ ಅವರವರ ಬುದ್ದಿಮತ್ತೆಗೆ ಸರಿಯಾಗಿ ಹೇಳಿಕೊಡುವ ಮತ್ತಿಬ್ಬರು ಗುರುಗಳು.

ಚಿಕ್ಕ ಮಕ್ಕಳಿಗೆ, ಅಕ್ಷರ ಮಾಲೆಯಿಂದ ಶುರು ಮಾಡಿ, ಕಾಗುಣಿತ, ಪದಗಳು, ವಾಕ್ಯಗಳು ಮತ್ತು ಚಿಕ್ಕ ಚಿಕ್ಕ ಪ್ರಬಂಧಗಳನ್ನು ಓದಲು ಮತ್ತು ಬರೆಯಲು, ಕನ್ನಡದಲ್ಲಿ ಪತ್ರ ಬರೆಯಲು ಗಣಕಯಂತ್ರದಲ್ಲಿಯೂ ಕೂಡ ಹೇಳಿಕೊಡಲಾಗುತ್ತದೆ. ಇದೇ ಮಕ್ಕಳು ಭಾರತದಲ್ಲಿದ್ದ ತನ್ನ ತಾತ-ಅಜ್ಜಿಗೆ ಇಮೇಲ್ ಮೂಲಕ ಕನ್ನಡದ ಪತ್ರಗಳನ್ನು ರವಾನಿಸಿದರೆ ಆಗುವ ಸಂತೋಷ ಊಹಿಸಿದರೆ ಮೈ ನವಿರೇಳುತ್ತದೆ.

ಚಿಕ್ಕ ಮಕ್ಕಳು ಕಲಿಯುವುದರಲ್ಲಿ ಬಹಳ ಚುರುಕು, ಅವರ ಕಲಿಕೆಯ ವೇಗಕ್ಕೆ ಸರಿಸಮಾನವಾಗಿ ಗುರುಗಳು ಸಿದ್ದರಾಗಿರಬೇಕು. ಮಕ್ಕಳ ಪ್ರಶ್ನೆಗಳು ಬಹು ಮುದ್ದ. ಕೆಲವೊಮ್ಮೆ ಗುರುಗಳನ್ನೇ ಸಂದಿಗ್ಧದಲ್ಲಿ ಸಿಲುಕಿಸುತ್ತಾರೆ. ಅಂತ ಒಂದು ಚಿಕ್ಕ ಉದಾಹರಣೆ, ಎಲ್ಲರೂ ಕನ್ನಡದಲ್ಲೇ ಮಾತಾಡಬೇಕು, ಕನ್ನಡ ಶಬ್ದಗಳ ಬಳಕೆ ಆಗಬೇಕು ಎಂದಾಗ ಒಂದು ಮರಿ ವಿಧ್ಯಾರ್ಥಿ... ಹಾಗಾದರೆ ಬಸ್ ಮತ್ತು ಕಾರಿಗೆ ಏನು ಹೇಳಬೇಕು ಅಂತ ಮರುಪ್ರಶ್ನೆ ಹಾಕಿದಾಗ, ಗುರುಗಳಾದ ನಾವು ಒಂದು ಬಾರಿ ಯೋಚಿಸುವ ಹಾಗಾಯಿತು. ನಂತರ ನಾವು ಆದಷ್ಟು ಕನ್ನಡ ಪದಗಳ ಬಳಕೆ ಮಾಡೋಣ, ಕೆಲವು ಇಂಗ್ಲಿಷ್ ಪದಗಳನ್ನು ಬಳಸಿದರೆ ತಪ್ಪಿಲ್ಲ ಎಂದು ಸರಿ ಪಡಿಸಬೇಕಾಯಿತು.

(ಮುಂದಿನ ಪುಟ ನೋಡಿ) ...

ಕೇಳೋಣ

ದ. ರಾ. ಬೇಂದ್ರೆಯ ಸಾಕ್ಷ್ಯ ಚಿತ್ರ

ನೋಡಲು ಚಿತ್ರ ಕ್ಲಿಕ್ ಮಾಡಿ (Click picture to view)

ಮುಂದಿರುವ ತಿಂಗಳ ಪ್ರಮುಖ ದಿನಗಳು ಪುಟ ೩ ರಲ್ಲಿ ...

ಸರ್. ಎಂ. ವಿ ಬಗೆಗಿನ ದೂರದರ್ಶನ ಕಂತು

ನೋಡಲು ಚಿತ್ರ ಕ್ಲಿಕ್ ಮಾಡಿ (Click picture to view)

ನೋಡೋಣ

ನಿಮ್ಮ ಕಥೆ, ಕವನ, ಸಲಹೆ ಇತ್ಯಾದಿ ನಮಗೆ ಕಳುಹಿಸಿ. ನಮ್ಮ ಇ-ಮೇಲ್ – HORANADACHILUME@GMAIL.COM

(ಹಿಂದಿನ ಪುಟದಿಂದ) ... ಮಕ್ಕಳಿಗೆ ಕನ್ನಡ ವಾರದ ದಿನಗಳು, ತಿಂಗಳು ಹೆಸರುಗಳನ್ನು ಬಾಯಿ ಪಾಠ ಮಾಡಿಸುತ್ತೇವೆ. ಮಕ್ಕಳಿಗೆ ಇಷ್ಟವಾಗುವುದು ಪದಆಟ. ಇಲ್ಲಿ ಇಂಗ್ಲಿಷ್ ಪದಕ್ಕೆ ಸರಿ ಸಮಾನವಾದ ಕನ್ನಡ ಪದಗಳನ್ನು ಹುಡುಕುವುದು. ಕೆಲವು ಚೂಟಿ ಮಕ್ಕಳು ಸಮಾನ ಅರ್ಥ/ವಿರುದ್ಧ ಪದಗಳನ್ನು ಹೇಳಿದರೆ ಆಶ್ಚರ್ಯ ಪಡುವ ಸರದಿ ಗುರುಗಳದಾಗಿರುತ್ತೆ. ಇದಕ್ಕೆ ಕಾರಣ ಮನೆಯಲ್ಲಿನ ಕನ್ನಡದ ವಾತಾವರಣ.

ಮಕ್ಕಳಿಂದ ಅವರ ಮಾತಿನಲ್ಲೇ ಅವರಿಗೆ ಇಷ್ಟವಾದ ೨-೩ ಸಂಗತಿಗಳನ್ನು ಹೇಳಿಸುತ್ತೇವೆ. ಇದರಿಂದ ಮಕ್ಕಳಿಗೆ ಕನ್ನಡದಲ್ಲಿ ಬೇರೆಯವರ ಮುಂದೆ ಕನ್ನಡ ಮಾತಾಡುವ ವಿಶ್ವಾಸ ನಂಬಿಕೆ ಬರುತ್ತದೆ.

ಸಿಡ್ನಿ ನಗರದಲ್ಲಿ ನೀವಿದ್ದು, ನಿಮಗೂ ಈ ಶಾಲೆಯ ಉಪಯೋಗ ಪಡೆಯಬೇಕೆ? ಶ್ರೀ ಕನಕಾಪುರ ನಾರಾಯಣರನ್ನು ಸಂಪರ್ಕಿಸಿ. ಅವರ ದೂರವಾಣಿ ಸಂಖ್ಯೆ +61 423634979.

ತಾಯಿನಾಡಿನ ಭಾಷೆ ಯಾವ ಮಣ್ಣಿನಲ್ಲಿ ಬೇಕಾದರೂ ಬೆಳೆಸಬಹುದು ಎಂದು ತೋರಿಸೋಣ!!! ಬನ್ನಿ ಜೊತೆಗೂಡಿ ▪

ವರದಿ: ಸ್ಮಿತಾ ಮೇಲ್ಕೋಟೆ

ಚಿತ್ರಗಳು: ರಾಜೇಶ್ ಹೆಗಡೆ, ಕನಕಾಪುರ ನಾರಾಯಣ



ಫಾಲ್ಗುಣ ಮಾಸ ಮುಗಿದು ಹೊಸ ಸಂವತ್ಸರ ಬರಮಾಡಲು ಯುಗಾದಿ ಕಾದು ನಿಂತಿದೆ. ಇನ್ನೊಂದಿಷ್ಟೇ ದಿನಗಳು. ವಿಜಯನಾಮ ಸಂವತ್ಸರದಲ್ಲಿ ಪ್ರಾರಂಭವಾದ "ಹೊರನಾಡ ಚಿಲುಮೆ" ನಿಮ್ಮೆಲ್ಲರ ಪ್ರೋತ್ಸಾಹದಿಂದ ಭಾಷೆಯ ಕಿಚ್ಚು ಹೆಚ್ಚಿಸುವಲ್ಲಿ ವಿಜಯಿಯಾಗುತ್ತಿದೆ ಎಂದು ನಿಸ್ಸಂಶಯವಾಗಿ ಹೇಳಬಹುದು. ನೂತನ ಸಂವತ್ಸರವಾದ "ಜಯ" ದಲ್ಲೂ ನಿಮ್ಮೆಲ್ಲರ ಸಹಕಾರ ಇರುವುದೆಂದು ನಂಬಿದ್ದೀವಿ.

ಮಾರ್ಚ್ ತಿಂಗಳು ಯುಗಾದಿಗಿಂತಲೂ ಇತ್ತೀಚೆಗೆ ಹೆಚ್ಚಾಗಿ ನೆನಪಿಗೆ ಬರುವುದು "ವಿಶ್ವ ಮಹಿಳಾ ದಿನಾಚರಣೆ" ಯಿಂದ. ೧೯೧೦ ರ ಮಾರ್ಚ್ ೮ ರಂದು ನ್ಯೂ ಯಾರ್ಕ್ ನಲ್ಲಿ "ವೃತ್ತಿಯಲ್ಲಿ ಸಮಾನ ಹಕ್ಕಿ"ಗಾಗಿ ಶುರುವಾದ ಆಂದೋಲನ ಇಂದು ಮಹಿಳೆಯರಿಗೆ ಅವರು ಸಾಮರಸ್ಯದ ಜೀವನಕ್ಕೆ ಮಾಡಿರುವ ಕೊಡುಗೆಗಾಗಿ ಅಭಿನಂದಿಸುವ ಒಂದು ಒಳ್ಳೆಯ ಅವಕಾಶದ ದಿನ ಎನ್ನಬಹುದು. ಬಹುತೇಕ ನಗರ-ಪಟ್ಟಣಗಳಿಗೆ ಸೀಮಿತವಾದ ಈ ಆಚರಣೆ, ಇನ್ನಿತರೆಡೆ ಇರುವ ಅಸಮಾನತೆಯತ್ತ ದೃಷ್ಟಿ ಹರಿಸಿಲ್ಲವೇನೋ ಎನಿಸುತ್ತದೆ. ಈ ನಿಟ್ಟಿನಲ್ಲಿ ಯೋಚಿಸಿದಾಗ ಸಂಘ ಕಟ್ಟಿ ದಿನಾಚರಣೆ ಆಚರಿಸದೆ, ಸ್ವಂತ ಪರಿಶ್ರಮದಿಂದ ಸುತ್ತ ಮುತ್ತಲಿನ ಜನಕ್ಕೆ ಸಹಾಯವಾಗಲೆಂದು ಸಾಲು ಮರಗಳನ್ನು ನೆಟ್ಟ "ಸಾಲು ಮರದ ತಿಮ್ಮಕ್ಕ" ಕೇವಲ ಆಚರಣೆ ಮಾತ್ರವಲ್ಲದೆ ರೂಡಿಮಾಡಿದವರ ಸಾಲಲ್ಲಿ ನಿಲ್ಲುತ್ತಾಳೆ. ಇತಿಹಾಸದುದ್ದಕ್ಕೂ ಇಂತಹ ಅನೇಕ ಸ್ವಾವಲಂಬಿ ಮಹಿಳೆಯರನ್ನು ಕಾಣುತ್ತೇವೆ. ಬ್ರಹ್ಮಜ್ಞಾನಿಗಳಾದ ಮೈತ್ರೇಯಿ, ಗಾರ್ಗಿಯರಿರಬಹುದು ಅಥವಾ ಇತ್ತೀಚಿನ ರಾಣಿ ಚೆನ್ನಮ್ಮ, ಝಾನ್ಸಿ ಲಕ್ಷ್ಮಿಯರಿರಬಹುದು. ಅವರಲ್ಲಿದ್ದದ್ದು ಒಂದು ಸಮಾಜ ಮುಖಿ ಚಿಂತನೆ. ಸಮಾನತೆ ಎನ್ನುವುದು ಮತ್ತೊಬ್ಬರನ್ನು ಸೋಲಿಸಿ ಪಡೆಯುವುದಲ್ಲವಲ್ಲವೇ, ಹೊಂದಾಣಿಕೆ, ಪ್ರೀತಿ, ಗೌರವದಿಂದ ಸಮಾನತೆ ಸಾಧ್ಯ. ಸಮಾನತೆಯಿಂದ ಸಾಮರಸ್ಯ. ಸಾಮರಸ್ಯದಿಂದ ಸಂತುಷ್ಟ ಜೀವನ. ಇದನ್ನು ಪುರುಷರು ಮತ್ತು ಮಹಿಳೆಯರು, ಇಬ್ಬರೂ ತಿಳಿದಿರಬೇಕಷ್ಟೇ.

ಈ ಸಂಚಿಕೆಯ "ರಾಂ ರಾಮ" ದಲ್ಲಿ ನಮ್ಮೆಲ್ಲರ ನೆಚ್ಚಿನ ಹಾಸ್ಯ ಲೇಖಕರಾದ ರಾಮನಾಥ್ ರವರು ನಿಮ್ಮನ್ನು ಮೂರು ಯುಗಗಳಿಗೆ ಕರೆದುಕೊಂಡು ಹೋಗುತ್ತಾರೆ. ಅವರ ಹಾಸ್ಯಧಾಟಿಯಲ್ಲಿ, ಮಹಿಳೆ ಸರ್ವಕಾಲ ಪ್ರಾಧಾನ್ಯಳು ಎಂದು ಪಾತ್ರಗಳನ್ನು ಉಲ್ಲೇಖಿಸಿ ವಿವರಿಸುತ್ತಾರೆ. ಅವರಿಗೆ ಪೂರಕವೆಂಬಂತೆ ಮಹಿಳೆ "ಮಲ್ಟಿ ಟಾಸ್ಕರ್" ಎಂದು ವಿಶಿಷ್ಟ ಶೈಲಿಯಲ್ಲಿ ಸ್ಮಿತಾ ಮೇಲ್ಕೋಟೆ "ಸಕಲ ಕಲಾ ವಲ್ಲಭೆ" ಎಂಬ ಹಾಸ್ಯಬರಹದಲ್ಲಿ ವಿವರಿಸುತ್ತಾರೆ. ತಪ್ಪದೇ ಓದಿ ನಿಮ್ಮ ಅಭಿಪ್ರಾಯ ತಿಳಿಸಿ.

ಬರಲಿರುವ ಜಯ ನಾಮ ಸಂವತ್ಸರ ತನ್ನ ನಾಮ ಬಲದಂತೆ ಎಲ್ಲರಿಗೂ ಸುಜಯವನ್ನು ದಯಪಾಲಿಸಲಿ ಎಂಬ ಹಾರೈಕೆ ಚಿಲುಮೆ ತಂಡದ್ದು. ನಿಮ್ಮೆಲ್ಲರಿಗೂ ಯುಗಾದಿ ಹಬ್ಬದ ಶುಭಾಶಯಗಳು ▪

ಆಚರಣೆ

ಶ್ರೀ ಮಧ್ವನವಮಿ ೨೦೧೪



ಈ ವರ್ಷವೂ ಪ್ರತಿವರ್ಷದಂತೆ ಸಿಡ್ನಿ ಶ್ರೀ ರಾಘವೇಂದ್ರ ಭಕ್ತ ಮಂಡಳಿಯವರು ಮಾಘ ಮಾಸದಲ್ಲಿ ಬರುವ ಶ್ರೀ ಮಧ್ವ ನವಮಿಯನ್ನು ಎಲ್ಲ ಭಕ್ತಾದಿಗಳು ಸೇರಿ ದಿನಾಂಕ ೧೬/೨/೧೪ ರಂದು ಆಬರ್ನ್ ನಲ್ಲಿ ಇರುವ ಶ್ರೀ ಮಂದಿರದಲ್ಲಿ ಆಚರಿಸಿದರು. ಶ್ರೀಮಾನ್ ಮಧ್ವಾಚಾರ್ಯರು ಮಾಘ ಶುದ್ಧ ನವಮಿಯಂದು ಬದರಿಕ್ಷೇತ್ರದಲ್ಲಿ ವ್ಯಾಸರೊಡನೆ ವಿಲೀನರಾಗಲು ಶಿಷ್ಯರಿಗೆ ಪ್ರವಚನ ಮಾಡುವಾಗ ಆಕಾಶದಿಂದ ಪುಷ್ಪಗಳ ಮಳೆಯಾಗಲು ಅದರಲ್ಲಿ ಅದೃಷ್ಯರಾದರು. ಈ ದಿನವನ್ನು ಶ್ರೀಮಧ್ವನವಮಿಯೆಂದು ಆಚರಿಸಲಾಗುತ್ತೆ. ಶ್ರೀ ಆಚಾರ್ಯರು ಶ್ರೀವಾಯುದೇವರ ಹಾಗು ಭೀಮದೇವರ ಅವತಾರವೆಂದು ಮಧ್ವಮತವನ್ನು ಪಾಲಿಸುವವರು ನಂಬುತ್ತಾರೆ. ಶ್ರೀಮಧ್ವಾಚಾರ್ಯರನ್ನು ಆನಂದತೀರ್ಥ ಎಂದೂ ಗುರುತಿಸುತ್ತಾರೆ. ಈ ಕೆಳಗಿನ ಮಂತ್ರವು ಅದನ್ನು ಸೂಚಿಸುತ್ತದೆ

"ಅಭ್ರಮಂ ಭಂಗರಹಿತಂ ಅಜಡಂ ವಿಮಲಂ ಸದಾ ಆನಂದತೀರ್ಥಮತುಲಂ ಭಜೇ ತಾಪತ್ರಯಾಪಹಂ"

ಈ ವರ್ಷವೂ ಎಲ್ಲ ಭಕ್ತಾದಿಗಳು ಸೇರಿದಮೇಲೆ ಸುಮಾರು ೧೦ ಗಂಟೆಗೆ ಎಲ್ಲರೂ ಸಂಕಲ್ಪ ಮಾಡಿ ನಂತರ ಶ್ರೀ ವಿಘ್ನೇಶ್ವರನ ಪೂಜೆಯೊಂದಿಗೆ ಶುರು ಮಾಡಿ, ಆಮೇಲೆ ಶ್ರೀ ಮಧ್ವಾಚಾರ್ಯರ ಚಿತ್ರಪಟಗಳಿಗೆ ಹಾಗೂ ಶ್ರೀ ಕೃಷ್ಣನಿಗೆ ಪೂಜೆ ಮಾಡಲಾಯಿತು. ಎಲ್ಲರೂ ತಂದ ಅವರವರ ಸಾಲಿಗ್ರಾಮ ಹಾಗೂ ವಿಗ್ರಹಗಳಿಗೆ ವಾಯುಸ್ತುತಿ ಪಠಣದಿಂದ ಅಭಿಷೇಕವನ್ನು ಹಾಲು, ಮೊಸರು, ತುಪ್ಪ, ಜೇನುತುಪ್ಪ, ಸಕ್ಕರೆ ಹಾಗು ಬಾಳೆಹಣ್ಣುಗಳಿಂದ ಮಾಡಿ ಸಲ್ಲಿಸಿದರು. ಆಮೇಲೆ ಎಲ್ಲ ವಿಗ್ರಹಗಳನ್ನು ತೊಳೆದು ಮತ್ತೆ ಇಟ್ಟು ಸುಧೀರ್ಘಪೂಜೆಯನ್ನು ಸುಗಂಧಪದಾರ್ಥಗಳಿಂದ ಹಾಗೂ ಪ್ರಸಾದದೊಂದಿಗೆ ಮುಗಿಸಿದರು.

ಆಮೇಲೆ ಶ್ರೀ ಆಚಾರ್ಯರ ಶ್ರೀಮಧ್ವವಿಜಯದ ಒಂದನೇ ಅಧ್ಯಾಯ, ಕೃಷ್ಣ ನಾಮಾವಳಿ, ದ್ವಾದಶಸ್ತೋತ್ರ , ಶ್ರೀ ಮಧ್ವನಾಮ, ಶ್ರೀ ರಾಘವೇಂದ್ರ ಸ್ತೋತ್ರಗಳನ್ನೂ ಹೇಳಿ ಮಹಾಪ್ರಸಾದ ನೈವೇದ್ಯ ಮಾಡಿ, ಆಮೇಲೆ ಭಕ್ತಾದಿಗಳು ಹಾಡು ಹೇಳಿ ಎಲ್ಲರಿಗೂ ಹೂವು ಮಂತ್ರಾಕ್ಷತೆ ಕೊಟ್ಟು ಮಂತ್ರಪುಷ್ಪಂ ಹೇಳಿ ಮಧ್ಯಹ್ನ ೧.೩೦ ಕ್ಕೆ ನಮಸ್ಕಾರಗಳೊಂದಿಗೆ ಮುಗಿಸಿದರು.

ಹೊರಗೆ ಪುಷ್ಕಳವಾದ ಪ್ರಸಾದ ವಿನಯೋಗ ಬಿಸಿಬೇಳೆ ಬಾತ್, ಮೊಸರನ್ನ, ಕೋಸಂಬರಿ, ಹಯಗ್ರೀವ ಹಾಗು ಪಾಯಸದೊಂದಿಗೆ ನಡೆದು ಬಂದವರೆಲ್ಲರೂ ಆಚಾರ್ಯರ ಕೃಪೆಗೆ ಪಾತ್ರರಾಗಿ ತೆರಳಿದರು. ▪

ವರದಿ: ಸುಧೀಂದ್ರ ರಾವ್

ಮುಂದೆರಡು ತಿಂಗಳ ಪ್ರಮುಖ ದಿನಗಳು

ಮಾಹಿತಿಗೆ www.sugamakannada.com ಗೆ ಭೇಟಿ ಕೊಡಿ

ಮಾರ್ಚ್ ಶ್ರೀ ವಿಜಯ/ಜಯನಾಮ ಸಂವತ್ಸರ, ಉತ್ತರಾಯಣ, ಶಿಶಿರ/ವಸಂತ ಋತು, ಮಾಘ/ಫಾಲ್ಗುಣ/ಚೈತ್ರ ಮಾಸ (MARCH)

01 ಶ - ಶಿವರಾತ್ರಿ ಅಮಾವಾಸ್ಯೆ

02 ಭಾ - ಫಾಲ್ಗುಣ ಮಾಸ ಆರಂಭ

12 ಬು - ಸರ್ವತ್ರ ಏಕಾದಶಿ

16 ಭಾ - ಕಾಮನ ಹಬ್ಬ/ಹೋಳಿ ಹಬ್ಬ

20 ಗು - ಸಂಕಷ್ಟಹರ ಗಣಪತಿ ಪೂಜೆ

27 ಗು - ಸರ್ವತ್ರ ಏಕಾದಶಿ

30 ಭಾ - ಯುಗಾದಿ ಅಮಾವಾಸ್ಯೆ

31 ಸೋ - ಯುಗಾದಿ ಹಬ್ಬ / ಚೈತ್ರ ಮಾಸ, ವಸಂತ ಋತು ಆರಂಭ

ಏಪ್ರಿಲ್ ಶ್ರೀ ಜಯನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ/ವೈಶಾಖ ಮಾಸ (APRIL)

04 ಶು - ದೇವರ ದಾಸಿಮಯ್ಯ ಜಯಂತಿ

08 ಮಂ ಶ್ರೀ ರಾಮನವಮಿ

11 ಶು - ಸರ್ವತ್ರ ಏಕಾದಶಿ

13 ಭಾ - ಮಹಾವೀರ ಜಯಂತಿ

14 ಸೋ - ಸೌರ ಯುಗಾದಿ

15 ಮಂ ಹನುಮಾನ್ ಜಯಂತಿ

18 ಶು - ಗುಡ್ ಫ್ರೈಡೇ, ಸಂಕಷ್ಟಹರ ಗಣಪತಿ ಪೂಜೆ

19 ಶ - ಹೋಲಿ ಸಾಟರ್ಡೇ

20 ಭಾ - ಈಸ್ಟರ್ ಸಂಡೇ

25 ಶು - ಸರ್ವತ್ರ ಏಕಾದಶಿ

28/29 - ಅಮಾವಾಸ್ಯೆ

30 ಬು - ವೈಶಾಖ ಮಾಸ ಆರಂಭ

ಕೀನ್-ವಾ (Quinoa)

ರಾಜಿ ಜಯದೇವ್ (Accredited Practising Dietician)
Mrs Raji Jayadev, B.Sc (Hons) Dip Nutr & Diet (Syd)

ಕೀನ್-ವಾ ವಿಶ್ವದ ಅತ್ಯಂತ ಪ್ರಾಚೀನ ಬೆಳೆಗಳಲ್ಲಿ ಒಂದು. ದಕ್ಷಿಣ ಅಮೇರಿಕಾದಲ್ಲಿರುವ ಪೆರು ದೇಶ ಇದರ ತವರು. ಸಸ್ಯಶಾಸ್ತ್ರೀಯವಾಗಿ ಇದನ್ನು ಕೀನೋಪೋಡಿಯಂ ಕ್ವಿನೊಯ (Chenopodium quinoa) ಎಂದು ಕರೆಯುತ್ತಾರೆ. ಕ್ವಿನೊಯ (Quinoa) ಸ್ಪಾನಿಷ್ ಪದ. ಇದರ ಉಚ್ಚಾರಣೆ ಕೀನ್-ವಾ (KEEN-wah) ಎಂದು.

'ಕೀನ್-ವಾ', ಈ ಹೆಸರನ್ನು ಮೊದಲಬಾರಿಗೆ ನಾನು ಕೇಳಿದ್ದು ೨೦೦೬ರಲ್ಲಿ, ದಕ್ಷಿಣ ಅಮೇರಿಕಾ ಪ್ರವಾಸ ಕೈಕೊಂಡಾಗ. ೩೨ ದಿನಗಳ ಪ್ರವಾಸ, ೩೧ ಆಸ್ಟ್ರೇಲಿಯನ್ನರು ಮತ್ತು ಸಸ್ಯಾಹಾರಿಯಾದ ನಾನು. ಹಸಿ ತರಕಾರಿ, ಹಣ್ಣು, ಹಾಲು, ಬ್ರೆಡ್ ಮತ್ತು ಚೀಜ್, ಇವುಗಳಲ್ಲಿ ೧೦ ದಿನಗಳನ್ನು ಕಳೆದ ಬಳಿಕ, ಬಿಸಿಯೂಟಕ್ಕೆ ಹಾತೊರೆಯತೊಡಗಿದೆ. ಹೋದ ರೆಸ್ಟೋರೆಂಟ್ ಗಳಲ್ಲೆಲ್ಲಾ ಬಿಸಿಯಾದ ಸಸ್ಯಾಹಾರವಿದೆಯೇ ಎಂದು ಕೇಳತೊಡಗಿದೆ. ಒಂದು ಹಳ್ಳಿಯ ರಿಸಾರ್ಟ್ ಹೋಟೆಲಿನಲ್ಲಿ (ಮಾನೇಜರ್ ಭಾರತೀಯ!) ಕೀನ್-ವಾ ಸೂಪ್ ಇದೆ ಎಂದಾಗ ನನ್ನ ಸಂತೋಷಕ್ಕೆ ಮಿತಿಯೇ ಇಲ್ಲವಾಯಿತು. ಸೂಪ್ ತುಂಬ ರುಚಿಯಾಗಿತ್ತು. ಮತ್ತೆರಡು ಸಲ ಹಾಕಿಸಿಕೊಂಡು ಸವಿದೆ. ೨೦೦೮ರಲ್ಲಿ ಆಸ್ಟ್ರೇಲಿಯಾದ ಹೆಲ್ತ್ ಫುಡ್ ಸ್ಟೋರ್ ಗಳಲ್ಲಿ ಕಾಣಿಸಿಕೊಂಡ ಕೀನ್-ವಾ ಬಹು ಬೇಗ ಜನಪ್ರಿಯಗೊಂಡು ೨೦೧೨ರಲ್ಲಿ ಸೂಪರ್ ಮಾರ್ಕೆಟ್ಟಿಗೆ ಕಾಲಿಟ್ಟಿತು.

ಅಕ್ಕಿ, ರಾಗಿ, ಗೋದಿಗಳಂತೆ ಕೀನ್-ವಾ ಒಂದು ಧಾನ್ಯವಲ್ಲವಾದರೂ ಇದನ್ನು ಉಪಯೋಗಿಸುವುದು ಇತರ ಧಾನ್ಯಗಳಂತೆ. ಇದು ಬೀಟ್ರೂಟ್ ಮತ್ತು ಸ್ವಿಸ್ ಚಾರ್ಡ್ ಕುಟುಂಬಕ್ಕೆ ಸೇರಿದ ಸಸ್ಯ.

ಕೀನ್-ವಾ, ಒಂದು ಉತ್ಕೃಷ್ಟ ಆಹಾರ ಪದಾರ್ಥ (super food) ಎಂದು ಖ್ಯಾತಿಪಡೆದಿದೆ. ಏಕೆಂದರೆ ಅಕ್ಕಿ, ರಾಗಿ, ಗೋದಿ ಮುಂತಾದ ಇತರ ಧಾನ್ಯಗಳಿಗೆ ಹೋಲಿಸಿದರೆ ಕೀನ್-ವಾ ಹೆಚ್ಚು ಪ್ರೋಟೀನನ್ನು ಹೊಂದಿದೆ. ಸಾಮಾನ್ಯವಾಗಿ ಪ್ರಾಣಿಜನ್ಯ ಆಹಾರಗಳಲ್ಲಿ ಪ್ರೋಟೀನಿನ ಗುಣಮಟ್ಟ ಉತ್ತಮ ದರ್ಜೆಯದಾಗಿರುತ್ತದೆ. ಅಂದರೆ ಪ್ರೋಟೀನನ್ನು ತಯಾರಿಸಲು ಬೇಕಾದ ಎಲ್ಲಾ ಬಗೆಯ amino acidಗಳು ಸಾಕಷ್ಟು ಪ್ರಮಾಣದಲ್ಲಿ ಇರುತ್ತವೆ. ಸಸ್ಯಜನ್ಯ ಆಹಾರಗಳಲ್ಲಿ ಪ್ರೋಟೀನಿನ ಗುಣಮಟ್ಟ ಎರಡನೆಯ ದರ್ಜೆಯದಾಗಿರುತ್ತದೆ. ಆದರೆ ಕೀನ್-ವಾದಲ್ಲಿ (ಪ್ರಾಣಿಜನ್ಯ ಆಹಾರಗಳಲ್ಲಿರುವಂತೆ) ಉತ್ತಮ ಗುಣಮಟ್ಟದ ಪ್ರೋಟೀನ್ ಇದೆ. ಹೊಟ್ಟು (ಫೈಬರ್), ದೇಹರಕ್ಷಕ anti-oxidants, ಹಲವಾರು ವಿಟಮಿನ್ಸ್ (ಉದಾ. B ಮತ್ತು E), ಮಿನರಲ್ಸ್ (ಉದಾ. phosphorus, copper, magnesium, zinc), ಮತ್ತು ಒಮೀಗಾ ೩ ಕೊಬ್ಬು ಕೂಡ ಗಣನೀಯ ಪ್ರಮಾಣದಲ್ಲಿವೆ.

ಕಡಿಮೆಮಟ್ಟದ Glycemic Index ಹೊಂದಿರುವ ಕೀನ್-ವಾ, wholegrain ಆಹಾರಪದಾರ್ಥ. Wholegrain ಆಹಾರಪದಾರ್ಥಗಳು ನಮ್ಮ ಜೀರ್ಣಾಂಗಗಳನ್ನು ಸುಸ್ಥಿತಿಯಲ್ಲಿಡುತ್ತವೆ. ಡಯಾಬಿಟಿಸ್ ಮತ್ತು ಹೃದಯರೋಗಗಳನ್ನು ತಡೆಹಿಡಿಯುತ್ತವೆ.

ಕೀನ್-ವಾ, ಅಕ್ಕಿ ಮತ್ತು ಗೋದಿಯಲ್ಲಿರುವ ಪೋಷಕಾಂಶಗಳ ಪಟ್ಟಿ.

ಆಹಾರಪದಾರ್ಥ – ೧೦೦ ಗ್ರಾಂ	ಅಕ್ಕಿ	ಗೋದಿ	ಕೀನ್-ವ್ಹಾ
Energy - ಶಕ್ತಿ (ಕ್ಯಾಲೋರಿ)	340	330	370
Protein - ಸಸಾರಜನಕ (ಗ್ರಾಂ)	6.6	12	14 (ಶ್ರೇಷ್ಠಮಟ್ಟದ್ದು)
Carbohydrate - ಶರ್ಕರಪಿಷ್ಟ (ಗ್ರಾಂ)	80	70	64
Fibre - ನಾರು, ಹೊಟ್ಟು (ಗ್ರಾಂ)	2.3	11	7
Fat - ಕೊಬ್ಬು (ಗ್ರಾಂ)	0.5	1.54	6 (ಒಮೀಗಾ ೩ ಒಳಗೊಂಡಿದೆ)

ಉಪಯೋಗಿಸುವುದು ಹೇಗೆ?

ಕೀನ್-ವಾವನ್ನು ಅನ್ನದಂತೆ ಬೇಯಿಸಿ ಸಾಂಬಾರ್ ಜೊತೆಗೆ ಸೇವಿಸಬಹುದು. ಮೊಳಕೆಬರಿಸಿದ ಕೀನ್-ವಾವನ್ನು ಕೋಸುಂಬರಿ, ಸಾಂಬಾರ್, ಮಜ್ಜಿಗೆಹುಳಿ, ಪಲ್ಯ, ಸಾಗು ಮುಂತಾದವುಗಳಿಗೆ ಹಾಕಬಹುದು. ಇದು ಕೇವಲ ೨ – ೪ ಗಂಟೆಗಳಲ್ಲಿ ಮೊಳೆಯುತ್ತದೆ.

ಕೀನ್-ವಾದ ಹೊರ ಕವಚದಲ್ಲಿ ಸ್ವಲ್ಪ ಕಹಿಯಿರುತ್ತದೆ. ಆದ್ದರಿಂದ ಉಪಯೋಗಿಸುವುದಕ್ಕೆ ಮುನ್ನ ಚೆನ್ನಾಗಿ ಉಜ್ಜಿ ತೊಳೆಯಬೇಕು. ೧ ಲೋಟ ಕೀನ್-ವಾಗೆ, ೨ ಲೋಟ ನೀರು ಸೇರಿಸಿ, ನೀರು ಇಂಗುವತನಕ ಬೇಯಿಸಬೇಕು. ಕೀನ್-ವಾವನ್ನು ಹುರಿದು ಉಪಯೋಗಿಸಿದರೆ ರುಚಿ ಹೆಚ್ಚೆಂದು ಕೇಳಿದ್ದೇನೆ.

ಕೊನೆಯ ಮಾತು.

ಕೀನ್-ವಾ ಒಂದು ಉತ್ಕೃಷ್ಟ ಆಹಾರ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಆರೋಗ್ಯವನ್ನು ಕಾಪಾಡಿಕೊಳ್ಳಲು ನೀವು ಕೀನ್-ವಾ ಸೇವಿಸಲೇ ಬೇಕು ಎಂದೇನೂ ಇಲ್ಲ. ಭಾರತೀಯ ಆಹಾರ ಪದಾರ್ಥಗಳಲ್ಲಿ ದೇಹಕ್ಕೆ ಬೇಕಾದ ಎಲ್ಲ ಪೋಷಕಾಂಶಗಳೂ ಇವೆ. ಯಾವ ದೇಶದ ಆಹಾರ ಪದ್ಧತಿಯೇ ಆಗಲಿ, ಬಗೆ ಬಗೆಯ ಪುಷ್ಟಿದಾಯಕ ಆಹಾರವನ್ನು ಮಿತವಾಗಿ ಸೇವಿಸಿದರೆ ಮಾತ್ರ ಆರೋಗ್ಯಕ್ಕೆ ಒಳ್ಳೆಯದು. ಆಯುರ್ವೇದದ ಒಂದು ಹೇಳಿಕೆ: "ನಾವು ಸೇವಿಸುವ ಆಹಾರದಿಂದ ಆರೋಗ್ಯ, ತೃಪ್ತಿ ಸಿಗಲಿ" ಎಂದು. ಅನ್ನ, ಸಾರು ಉಂಡಾಗ ಸಿಗುವ ತೃಪ್ತಿ, ಕೀನ್-ವಾ ಮತ್ತು ಸಾರು ಉಂಡಾಗ ಸಿಗದಿದ್ದರೆ ಏನು ಪ್ರಯೋಜನ? ಒಂದು ಹಿಡಿಯಷ್ಟು ಮೊಳಕೆಬರಿಸಿದ/ಬೇಯಿಸಿದ ಕೀನ್-ವಾವನ್ನು ನಾವು ಮಾಡಿದ ಅಡಿಗೆಗೆ ಹಾಕಿದರೆ ರುಚಿಯೂ ಬದಲಾಗುವುದಿಲ್ಲ. ಕೀನ್-ವಾದಲ್ಲಿರುವ ಉತ್ಕೃಷ್ಟ ಪೋಷಕಾಂಶಗಳೂ ಸಿಗುತ್ತವೆ.▪

ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ ...

ಇವೆಲ್ಲವುಗಳಿಗಿಂತ ಕಳಸವಿಟ್ಟ ಹಾಗೆ ಅವರ ಅನರ್ಥ ಕೋಶ ಕನ್ನಡ ಸಾರಸ್ವತ ಲೊಕಕ್ಕೆ ಒಂದು ಅನನ್ಯ ಕೊಡುಗೆ. ಅದರ ಕೆಲವು ಸ್ಯಾಂಪಲ್ಗಳು ಹೀಗಿವೆ.

ಅಕ್ರೂರ	- ರಿಟೈರಾದ ಉನ್ನತಾಧಿಕಾರಿ
ಅಧ್ಯಾಪಕ	- ಶಾಲೆಯೆಂಬ ಗೊಂಡಾರಣ್ಯದಲ್ಲಿ ರೋಧನ ಮಾಡುವವ
ಅಮ್ಮಾವರ ಗಂಡ	- ತನ್ನ ಪತ್ನಿಯನ್ನೇ ಪ್ರೇಮದಿಂದ ಮುದ್ದಿಸುವ ಪತಿ
ಆಫೀಸ್	- ಮನೆ ತಾಪತ್ರಯಗಳನ್ನು ಮರೆತು ನೌಕರರು ನಿದ್ದೆ ಮಾಡುವ ಜಾಗ
ಅಡುಗೆ	- ಸಂಪಾದಿಸಿ ತಂದಿದ್ದನ್ನು ಮನೆಯಲ್ಲಿ ಹಾಳುಮಾಡುವ ವಿಧಾನಗಳಲ್ಲೊಂದು
ಅಯೋಗ್ಯ	- ನಾವು ಬಯಸುವ ಹುದ್ದೆಗೆ ಪೈಪೋಟಿ ಮಾಡುವವ
ಈಜಾನುಬಾಹು	- ಈಜುವುದಕ್ಕೆ ಅನುಕೂಲವಾಗುವಷ್ಟು ಉದ್ದವಾದ ಬಾಹುಗಳುಳ್ಳವನು
ಉತ್ತರಕ್ರಿಯೆ	- ಪರೀಕ್ಷೆಗಳಲ್ಲಿ ಉತ್ತರ ಬರೆಯುವ ಕ್ರಿಯೆ
ಉಳಿತಾಯ	- ನಮಗೆ ಸಾಲ ಕೊಡಬೇಕಾದವರು ಮಾಡಬೇಕಾದ ಕರ್ತವ್ಯ
ಏಕಪತ್ನೀವ್ರತಸ್ಥ	- ಒಂದೇ ದೇವರನ್ನು ಪೂಜಿಸುವವ
ಅಗಸ	- ನಮ್ಮ ಬಟ್ಟೆಗಳಿಂದ ಬಂಡೆಯನ್ನು ಒಡೆಯಲೆತ್ನಿಸುವ ಧೀರ. ಅರಿವೆಯನ್ನು ಹರಿವೆ ಎಂದೇ ಹೇಳುವವನು
ಅಗ್ನಿಮಿತ್ರ	- ಪೆಟ್ರೋಲ್
ಅಡುಗೆ	- ಸಂಪಾದಿಸಿ ತಂದಿದ್ದನ್ನು ಮನೆಯಲ್ಲಿ ಹಾಳುಮಾಡುವ ವಿಧಾನಗಳಲ್ಲೊಂದು
ಅಮ್ಮಾವ್ರ ಗಂಡ	- ತನ್ನ ಸತಿಯನ್ನೇ ಪ್ರೇಮದಿಂದ ಮುದ್ದಿಸುವ ಪತಿ
ಅಯೋಗ್ಯ	- ನಾವು ಬಯಸುವ ಹುದ್ದೆಗೆ ಪೈಪೋಟಿ ಮಾಡುವವ
ಆಫೀಸ್	- ಮನೆ ತಾಪತ್ರಯಗಳನ್ನು ಮರೆತು ನೌಕರರು ನಿದ್ದೆ ಮಾಡುವ ಸ್ಥಳ

ಇವುಗಳು ಕೇವಲ ಸ್ಯಾಂಪಲ್ಗಳಷ್ಟೆ. ಇಂಥಾ ಸಾವಿರಾರು ಅನರ್ಥಗಳ ಮುಖಾಂತರ ಮುದ ಕೊಟ್ಟವರು ಕಸ್ತೂರಿ.
ಅವರ ಹಾಸ್ಯ ಲೇಖನದ ಒಂದು ಮಾದರಿ ಹೀಗಿದೆ.

ಬಾಲವೇ ನಾಸ್ತಿ

ಸುಗ್ರೀವ, ಆಂಜನೇಯ ಮುಂತಾದ ಕಪಿಗಳೆಲ್ಲರೂ ಶ್ರೀರಾಮನೊಂದಿಗೆ ಸೀತಮ್ಮನವರನ್ನು ಬಿಡಿಸಿಕೊಂಡು ಬರುವುದಕ್ಕಾಗಿ ಲಂಕೆಗೆ ಹೊರಟರು. ,ಸುಗ್ರೀವನ ರಾಣೀವಾಸದವರಿಗೆ ಅವರೆಲ್ಲರೂ ಎಂದು ಹಿಂತಿರುಗಿ ಬರುತ್ತಾರೋ ಎಂಬುದೇ ಚಿಂತೆ. ರಾಮನ ಅನುಗ್ರಹದಿಂದ ಕಪಿಗಳಿಗೆ ಯಾವ ಅಪಾಯವೂ ತಗುಲುವುದಿಲ್ಲವೆಂದು ಅವರಿಗೆ ಗೊತ್ತು. ಅವರಿಗಿದ್ದ ಬಯಕೆ ಬೇರೊಂದು.

ರಾಣೀವಾಸದವರು ಯಾರೂ ಮನುಷ್ಯ ಜಾತಿ ಹೆಂಗಸನ್ನು ನೋಡಿರಲಿಲ್ಲ. ರಾಜಕುಮಾರಿಯನ್ನು ಅವರು ಕಂಡಿದ್ದೆ ಇಲ್ಲ. ಸೀತಾದೇವಿ, ಮಹಾರಾಜನ ಮಗಳು, ಮಹಾರಾಜನ ಸೊಸೆ. ಅವಳ ಅಂದವನ್ನೂ ಚೆಂದವನ್ನೂ ಎಲ್ಲರೂ ಕೊಂಡಾಡುತ್ತಿದ್ದರು. ಲಂಕಾಧೀಶ್ವರನು ಅವಳನ್ನು ಅಪಹರಿಸಿದನು. ಶ್ರೀರಾಮಚಂದ್ರನು ಅವಳನ್ನು ಬಿಡಿಸಿತರಲು ದಂಡು, ಧಾಳಿ ಕಟ್ಟಿಕೊಂಡು ಹೋಗುತ್ತಿದ್ದಾನೆ. ಆದ್ದರಿಂದ ರಾಣಿಯವರಿಗೆ ಸೀತಾದೇವಿಯನ್ನು ನೋಡಬೇಕೆಂದ ಆಸೆ ಉಂಟಾಯಿತು.

ರಾಕ್ಷಸರನ್ನು ಕೊಂದು ಸೀತೆಯನ್ನು ಅಯೋಧ್ಯೆಗೆ ಕರೆದುಕೊಂಡು ಹೋಗುವಾಗ ದಾರಿಯಲ್ಲಿ ತಮ್ಮ ಊರಿಗೆ ಬಂದು ಒಂದು ದಿನ ತಂಗಲೇಬೇಕೆಂದು ಅವರು ಬಲವಂತ ಪಡಿಸಿದರು. ರಾಮನೂ ಕೂಡಾ ಆಗಬಹುದು ಎಂದು ಒಪ್ಪಿದನು.

ಮುಂದಿನ ಪುಟ ನೋಡಿ ...

ಒಂದೆರಡು ತಿಂಗಳಾದ ಕೂಡಲೇ ರಾಣಿವಾಸದವರೆಲ್ಲರೂ ಎತ್ತರವಾದ ಒಂದು ಮರವನ್ನು ಹುಡುಕಿದರು. ಅದರ ತುತ್ತ ತುದಿಯಲ್ಲೇ ಕುಳಿತು ದಿನವೂ ಲಂಕೆಯ ಕಡೆ ಆಕಾಶವನ್ನೇ ನೋಡುವರು. ಹನುಮಂತನ ಹೆಗಲ ಮೇಲೆ ಗಂಡ, ಹೆಂಡತಿ, ಮೈದುನ ಬರುವರು ಎಂದು ಅವರ ನಂಬಿಕೆ. ಆದರೆ ರಾಮನು ಆ ರೀತಿ ಬರಲಿಲ್ಲ. ಕುಬೇರನ ವಿಮಾನದಲ್ಲಿ ಬಂದಿಳಿದನು. ವಿಮಾನದೊಳಗಿಂದ ರಾಮ, ಲಕ್ಷ್ಮಣ, ಸೀತೆ, ವಿಭೀಷಣ, ಕಪಿವೀರರು ಎಲ್ಲರೂ ಹೊರಕ್ಕೆ ಬಂದರು. ಅವರೆಲ್ಲರೂ ಸುಗ್ರೀವನ ಅರಮನೆಯ ಅಂಗಳದ ಕಡೆಗೆ ನಡೆದರು.

ರಾಣೀವಾಸದವರೆಂದರೆ ಹೆಣ್ಣು ಕಪಿಗಳು. ಅವರು ಸೀತೆಯನ್ನು ಬಿಟ್ಟ ಕಣ್ಣು ಬಿಟ್ಟ ಹಾಗೆ ಕೊಂಚ ಹೊತ್ತು ನೋಡಿದರು. ನೋಡಿ, ಕಿಚಪಿಚ ನಕ್ಕರು. ಅವರ ಮನೆಯೊಳಕ್ಕೆ ಛಂಗನೆ ನೆಗೆದರು. ನೆಲದ ಮೇಲೆ ಬಿದ್ದು ನಕ್ಕರು. ಇವಳೇನೇ ಸೀತೆ? ಸ್ವಲ್ಪವೂ ಚನ್ನಾಗಿಲ್ಲ. ಮುಖ ಮುಂದಕ್ಕೆ ಚಾಚಿರಬೇಡವೇ? ಎಷ್ಟು ಅಗಲ ಅವಳ ಕಣ್ಣು. ಹಣೆಯೂ ತುಂಬಾ ಅಗಲ. ಉದ್ದವಾದ ಜಡೆ ಬೇರೆ. ವಿಪರೀತ ಎತ್ತರ. ಕೈ ಬೇರೆ ಮೋಟು. ಬಾಲವೇ ನಾಸ್ತಿ ಎಂದು ಒಬ್ಬರಿಗೊಬ್ಬರು ಹೇಳಿಕೊಂಡರು.

ಇದು ಅವರ ಹಾಸ್ಯ ಲೇಖನದ ಒಂದು ಮಾದರಿ. ಇಂತಹ ನೂರಾರು ಸಾವಿರಾರು ಲೇಖನಗಳನ್ನು ಬರೆದು ಜನಮಾನಸದಲ್ಲಿ ನೆಲೆಸಿದರು.

ಸಾಮಾನ್ಯವಾಗಿ ಇಂದು ನಮಗೆಲ್ಲ ಭಾನುವಾರ ಬಂದರೆ ಏನು ಮಾಡೋದು ಎನ್ನುವ ಯೋಚನೆ ಇರುತ್ತದೆ. ಭಾನುವಾರ ಮಾಡೋಣ ಅಂತ ಅನೇಕ ಕೆಲಸಗಳನ್ನು ಮುಂದುಮುಂದಕ್ಕೆ ಹಾಕಿಕೊಂಡು ಬಂದಿರುತ್ತೇವೆ. ಆದರೆ ಭಾನುವಾರ ಬಂದರೆ ಮಾತ್ರ ಯಾವ ಕೆಲಸ ಮಾಡೋದು ಯಾವ ಕೆಲಸ ಬಿಡೋದು ಎನ್ನುವ ಚಿಂತೆ ಕಾಡಿ ಕೊನೆಗೆ ಯಾವ ಕೆಲಸವನ್ನೂ ಮಾಡದೇ ಎಲ್ಲವನ್ನೂ ಮುಂದಿನ ಭಾನುವಾರಕ್ಕೆ ಮುಂದೂಡಲಾಗುತ್ತದೆ. ಅಂದಿನ ದಿನಗಳಲ್ಲಿಯೂ ಈತರದ ಜಿಜ್ಞಾಸೆ ಮೂಡುತ್ತಿತ್ತಂತೆ.ಅದನ್ನು ಕಸ್ತೂರಿಯವರು ತುಂಬಾ ಚನ್ನಾಗಿ ಒಂದು ಕವನದ ಮೂಲಕ ವಿವರಿಸಿದ್ದಾರೆ. ಅದು ಹೀಗಿದೆ.

ಸಂಡೇ ಸಂದೇಹ

ಪೇಪರೋದಲೆ ? ಷೇವು ಮಾಡಲೇ?
ಸುಂನೆ ಕುರ್ಚಿಲಿ ಕೂರಲೇ
ಮಕ್ಕಳಿಬ್ಬರ ಹೋಮುವರ್ಕನು
ಮಾಡಿಕೊಡಲೇ ಈಗಲೇ
ಭಾನುವಾರವು ಹಾಳು ಬಂದರೆ
ಏನು ಮಾಡುವುದೆಂದು ತೋಚದು
ಗಾಣದೆತ್ತನು ಬಿಚ್ಚಿ ಬಿಟ್ಟರೆ
ಮತ್ತೆ ರೌಂಡೇ ಹೊಡೆವುದು

ಮಾವಗೊಂದು ಪತ್ರ ಬರೆಯಲೇ?
ಹಿತ್ತಲನು ಗುಡಿಸಲೇ
ಬಟ್ಟೆ ಒಗೆಯಲೇ? ಎರೆದು ಕೊಳ್ಳಲೇ?
ಮಾರ್ನಿಂಗ್ ಷೋವಿಗೆ ಹೋಗಲೇ?
ಹಳೆಯ ಗೆಳೆಯರಿಗಿತ್ತ ಸಾಲವ
ಕಾಡಿ ಬೇಡಿ ಪಡೆಯಲೇ?

ಹರಿದ ಪರ್ಸನು ಹೊಲಿದು ಮಡಗಲೇ
ರಾಮನಾಮವ ಬರೆಯಲೇ
ಸಣ್ಣ ಕೂಸನು ಆಸುಪತ್ರಿಗೆ
ಸಾಗಿಸೌಷಧ ಕುಡಿಸಲೇ

ಅವಳ ಕೋಪವ ತಣಿಸಿ ಸೀರೆಯ
ಕೊಂಡು ಕಾಲಿಗೆ ಬೀಳಲೇ
ಅಚ್ಚುಕಟ್ಟಾಗೂಟ ಮಾಡಲು
ಆಲೂಗೆಡ್ಡೆಯ ಹೆಚ್ಚಲೇ

ಭೇದಿ ಮಾತ್ರೆಯ ನುಂಗಿ ಹೊಟ್ಟೆಯ
ಕ್ಲೀನು ಮಾಡಲೇ ಮಲಗಲೇ?

ಉಳಿದ ದಿನಗಳು ಏನು ಮಾಡುವು
ದೆಂಬುದೆಲ್ಲವು ಗೊತ್ತಿದೆ
ಭಾನುವಾರವು ಬಂದಿತೆಂದರೆ
ಮೆದುಳಿಗೇನೂ ತೋಚದು.

ಮುಂದಿನ ಪುಟ ನೋಡಿ ...

ಪ್ರಶ್ನೋತ್ತರ

ನಮ್ಮ ದೇಶದ ಅತಿ ದೊಡ್ಡ ಕೈಗಾರಿಕೆ ಯಾವುದು	-	ತಿರುಪೆ
ಅದಕ್ಕಿನ್ನೊಂದು ಹೆಸರು ಹೇಳಿ ನೋಡೋಣ	-	ಮಾಮೂಲು
ವಿಶ್ವವಿದ್ಯಾನಿಲಯದ ಪದವೀಧರರಿಗೆ ಕರಿ ಅಂಗಿ ಯಾಕೆ	-	ವಿದ್ಯಾಗಣಪತಿ 'ಕರಿ'ವದನನಲ್ಲವೇ
ಈಗಿನ ಲಾರಿಗಳಿಗೆ ಆರು ಚಕ್ರಗಳು ಯಾಕೆ	-	ದಾರಿಹೋಕರೆಲ್ಲರೂ ನಾಲ್ಕು ಚಕ್ರಗಳಿಂದ ತಪ್ಪಿಸಿಕೊಳ್ಳುತ್ತಿರುವುದರಿಂದ
ಹಾಲಿಗೆ ನೀರು ಬೆರೆಸುವುದೇಕೆ	-	ಹಸುವಿಗೆ ಎಷ್ಟು ನೀರು ಕುಡಿಸಿದರೂ ಪ್ರಯೋಜನವಿಲ್ಲದಿರುವುದರಿಂದ

<u>ಅಳಿಯ ಮಾವನಿಗೆ ಹೇಳೋ ಮಾತು</u>

ನಾನ್ಯಾಕೆ ಬಡವನು ನಾನ್ಯಾಕೆ ಪರದೇಶಿ
ಸೋಮಾರಿ ಹೇ ಮಾವ ನೀನಿರುವ ತನಕ

ಪುಟ್ಟಿಸಿದ ತಾಯಿ ತಂದೆ ಎಷ್ಟು ಮಾತ್ರದ ನಂಟು
ಕಷ್ಟದಲಿ ಕೈ ಹಿಡಿದ ಸತಿಯ ತಂದೆ

ಪೆಟ್ಟಿಗೆಯೊಳಗಿನ ಚೆಕ್ಕು ಬುಕ್ಕಿನ ಹಾಳೆ
ನೆಟ್ಟಗೆ ರುಜು ಹಾಕಿ ನೀ ಕೊಡುವ ತನಕ

ಬೂಟ್ಸು ಕೊಟ್ಟವ ನೀನೆ ಪಾಲಿಷ್ ಹಾಕುವವ ನೀನೆ
ಉಡಲು ಹೊದಿಯಲು ಬಟ್ಟೆ ಕೊಡುವವ ನೀನೆ

ಮಡದಿ ಬಾಣಂತನವ ನಡೆಸಿಕೊಡುವವ ನೀನೆ
ಬಿಡದೆ ಸಲಹುವ, ಮಡೆಯ, ನೀನಿರುವ ತನಕ

ವಿದ್ಯೆ ಕಲಿಯಲು ನೀನೆ ದುಡ್ಡು ಬಿಚ್ಚಿದೆ ಸುಮ್ಮನೆ
ಉದ್ಧಾರ ಕರ್ತ ಮಮ ಸ್ವಾಮಿ ನೀನೆ

ಪೆದ್ದನೀ ಹಣವಂತ, ಮಾವ, ನಿನ್ನಡಿ ಮೇಲೆ
ಬಿದ್ದುಕೊಂಡಿರುವ ನನಗೆ ಯಾತರ ಭಯವು

<u>ಅಂದಿನ ಗಾದೆಗಳು</u>

- ಬೀಗರು ಬೀಗರು ಒಂದು ಅವರನ್ನು ಕೂಡಿಸಿದ ಪುರೋಹಿತರೇ ಒಂದು
- ಅಳಿಯನಿಗೆ ಅಧಿಕಾರ ಸಿಕ್ಕರೆ ಅತ್ತೆ ಅಟ್ಟಕ್ಕೆ ಹೋದಳು
- ಮದುವೆ ಕಾಲ ಬಂದರೆ ಸರಿ, ಮಾರ್ವಾಡಿ ಮೆರೆದದ್ದೂ ಮೆರೆದದ್ದೇ
- ಸಾಲಂಕೃತ ಕನ್ಯಾದಾನ ಮಾಡಿದರೆ ಸಾಲ ಕೊಟ್ಟ ಶೆಟ್ಟಿ ಸುಮ್ಮನಿದ್ದಾನೆಯೇ
- ಮದುವೆಗೆ ಬಂದ ಬಡ ಬೀಗಿತ್ತಿಗೆ ಇಜ್ಜೋಡಿ ಮಕ್ಕಳು
- ಜಡ್ಡಿ ವರ ಕೊಟ್ಟರೂ ಗುಮಾಸ್ತೆ ಕೊಡಬೇಕಲ್ಲ
- ಚೋಟುದ್ದ ಲಾಯರಿಗೆ ಮೋಟುದ್ದ ಗುಮಾಸ್ತೆ
- ಕಕ್ಷಿ ಕಣ್ಣೆಲ್ಲಾ ಸಾಕ್ಷಿ ಮೇಲೆ
- ಲಾಯರ ಮೇಲೆ ಲಾಯರು ಬಿದ್ದರೆ ಸತ್ಯ ಹೊರ ಬರುತ್ಯೇ
- ಬೆರಳು ತೋರಿಸಿದರೆ ಉಂಗುರ ಹಾಕಿಬಿಡುತ್ತಾರೆ

ಮುಂದಿನ ಪುಟ ನೋಡಿ ...

ಪರೀಕ್ಷೆಗೆ ಸಂಬಂಧ ಪಟ್ಟ ಗಾದೆಗಳು

ಕೊಡುವುದು ಒಂದು ಕ್ವಶ್ಚನ್ - ಬಿಡುವುದು ನೂರೆಂಟು ಬುರುಡೆ
ರಾತ್ರಿಯೆಲ್ಲಾ ರಾಮಾಯಣ ಹೇಳಿಕೊಟ್ಟು ಬೆಳಗಾಗೆದ್ದು ರಾಮನಿಗೂ ಸೀತೆಗೂ ಏನು ಸಂಬಂಧ ಅಂತ ಕೇಳುತ್ತಾರೆ
ಇನ್ನಿಲ್ಲಾ ಅಂತ ಬರೆದರೂ ಚೆನ್ನಿಲ್ಲಾ ಅಂತ ಜರೆಯುತ್ತಾರೆ
ಆನ್ಸರ್ ತೋರಿಸಿ ಅವಲಕ್ಷಣ ಅಂತ ಅನಿಸಿಕೊಂಡ ಹಾಗೆ
ಗುರುಗಳು ಕಲಿಸಿದ್ದು ಠಕ್ಕು ಹುಡುಗ ನಂಬಿದ್ದು ಲಕ್ಕು
ದಡ್ಡನ ಹಿಂದಿನ ಸೀಟಿನಲ್ಲಿ ಕೂರಬಾರದು ಪೆಚ್ಚನ ಪಕ್ಕದ ಸೀಟಿನಲ್ಲಿ ಕೂರಬಾರದು
ಕೆಟ್ಟ ಮೇಲೆ ಬುದ್ದಿ ಬಂತು ಕೊಟ್ಟ ಮೇಲೆ ಉತ್ತರ ಹೊಳೆಯಿತು
ಕಾಪಿ ಮಾಡಕ್ಕೆ ಬರದವನು ಕ್ವಶ್ಚನ್ ಪೇಪರ್ ದೂರಿದ

ಅಣಕ ಹಾಡು

(ಡಿವಿಜಿ ಯವರ ಕ್ಷಮೆ ಕೋರಿ)

ಮಾತು

ಕೋಪ ಸಹಜದ ಧರ್ಮ ರೇಗುವುದು ಪತಿ ಧರ್ಮ
ರೇಗಿ ರೇಗಿಸುತಿಹುದೇ ಪತಿದರ್ಮ
ರೇಗಿ ರೇಗಿಸಿ ಉರಿದು ಸತಿಯ ಗೋಳಾಡಿಸುವ
ವರವ ನಿಮಗಿತ್ತನಲ ದೇವ ಬೊಮ್ಮ

ಮರು ಮಾತು

ಅಳುವು ಸಹಜದ ಧರ್ಮ ಅಳುತಿಹುದೇ ಸ್ತ್ರೀ ಧರ್ಮ
ಅತ್ತು ಅಳು ಬರಿಸುವುದೇ ಸತಿಯ ಧರ್ಮ
ಅಳುವ ಅಳಿಸುವ ಅತ್ತು ಪತಿಯ ಗೋಳಾಡಿಸುವ
ಲಲನೆಯರ ಸೃಜಿಸಿದನೇ ಮಂಕು ಬೊಮ್ಮ

ಕಡೆಯದಾಗಿ ಕಸ್ತೂರಿಯವರು ತಮ್ಮಲ್ಲಿದ್ದ ಹಾಸ್ಯಪ್ರಜ್ಞೆಯನ್ನು ಹೀಗೆ ಒಟ್ಟುಗೂಡಿಸುತ್ತಾರೆ. ಹಾಸ್ಯಪ್ರಜ್ಞೆ ಇದ್ದರೆ ಜೀವನದಲ್ಲಿ ಕ್ಷುದ್ರವಾದುದು ಯಾವುದು ಮುಖ್ಯವಾದುದು ಯಾವುದು ಎಂಬ ಸಾರಾಸಾರ ಜ್ಞಾನ, ಮೌಲ್ಯ, ವಿವೇಚನೆ, ಸುಖ-ದು:ಖ ಭಯ-ಕ್ಲೇಷ ಏರಿಳಿತಗಳನ್ನು ಪ್ರಸನ್ನ ಚಿತ್ತದಿಂದ ನೋಡುವ ಸಮತೋಲಿತ ಮನೋಧರ್ಮ ಬೆಳೆಯುತ್ತದೆ. ಅದಮ್ಯವಾದ ಕುತೂಹಲ, ವಿಸ್ಮಯಗಳು ನಮಗೆ ನಾವೇ ತಂದುಕೊಳ್ಳುವ ತಾಪತ್ರಯಗಳ ಬಗ್ಗೆ ಔದಾಸೀನ್ಯ ನನ್ನ ಸ್ವಭಾವದಲ್ಲಿ ಬೆಳೆದು ಬಂದ ಗುಣಗಳು.▪ (ಮುಕ್ತಾಯ)

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"


ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ವಿಮೆನ್ಸ್ ಎರಾ

'ಮಾರ್ಚ್ ಎಂಟು ಬಂತು ಕಣೋ'

'ಸೋ ವಾಟ್? ಟೈಂ ಮಾರ್ಚಸ್ ಆನ್. ಮಾರ್ಚ್ ಏಳಾದ ಮೇಲೆ ಎಂಟು ಬಂದೇ ಬರತ್ತೆ'

'ಏಯ್; ಇವತ್ತು ವಿಮೆನ್ಸ್ ಡೇ ಕಣೋ'

'ನಾನ್ಸೆನ್ಸ್; ಪ್ರತಿ ದಿನ, ಪ್ರತಿ ತಿಂಗಳು, ಪ್ರತಿ ವರ್ಷ, ಪ್ರತಿ ಯುಗವೂ ಹೆಂಗಸರದೇ. ಎವೆರಿ ಎರಾ ಈಸ್ ವಿಮೆನ್ಸ್ ಎರಾ'

'ಹಾಗೇನಿಲ್ಲ ಬಿಡು. ತ್ರೇತಾಯುಗದಲ್ಲಿ ಪುರುಷರದೇ ಪ್ರಾಧಾನ್ಯ'

'ನಾಟ್ ಎಟ್ ಆಲ್. ಧಾನ್ಯಕ್ಕೆ ಅವರು, ಪ್ರಾಧಾನ್ಯಕ್ಕೆ ಹೆಂಗಸರೇ'

'ಪ್ರೂವ್ ಯುವರ್ ಪಾಯಿಂಟ್'

'ಓಕೆ. ಶ್ರೀರಾಮನು ಶುಚಿರ್ಭೂತನಾಗಿ ಸಿನಿಮಾನಟಿಯರ ಮೈಕಾಂತಿ, ಸಾಧುಗಳ ಜಾಣ್ಮೆ, ಕೇಸರಿಗಳ ಅದಟಿನಿಂದ ಶೋಭಿಸುತ್ತಾ ರಾಜರೀವಿಯಿಂದ ಪಟ್ಟಾಭಿಷೇಕಕ್ಕೆ ಅಣಿಯಾದಾಗ 'ಸ್ಟಾಪ್ ಇಟ್ ಮಿಸ್ಟರ್ ದಶರಥ್. ದಿಸ್ ಶಲ್ ನಾಟ್ ಹ್ಯಾಪನ್. ಆಫ್ ಯು ಗೋ ಟು ದ ಫಾರೆಸ್ಟ್ ಮಿಸ್ಟರ್ ರಾಮ್' ಎಂದು ಕಣ್ಣಿನಲ್ಲೇ ರೆಡ್ ಸಿಗ್ನಲ್ ಕೊಟ್ಟದ್ದು ಕೈಕೇಯಿ. ಕೈಕೇಯಿ ಹೆಣ್ಣು; ನಡೆದದ್ದು ಅವಳ ಮಾತೇ; ದಶರಥ ಮೈನಸ್ ಟೆನ್ ರಥಾಸ್ ಆಗಿ ನೆಲ ಕಚ್ಚಿದ. ಸ್ತ್ರೀಶಕ್ತಿ ವಿಜೃಂಭಿಸಿತು!'

'ಯೂ ಮೇ ಹ್ಯಾವ್ ಎ ಪಾಯಿಂಟ್ ದೇರ್'

'ಕೈಕೇಯಿಯ ದಾಸಿ ಮಂಥರೆ. ದಶರಥನಿಗೆ ವಸಿಷ್ಠರಂತಹ ಗುರುಗಳಿದ್ದರು. ಆದರೂ ಗುರುಗಳು, ಮಂತ್ರಿಗಳ ಮಾತಿಗಿಂತಲೂ ಹೆಚ್ಚು ಪ್ರಭಾವ ಬೀರಿದ್ದು ದಾಸಿಯ ಮಾತು! ವುಮನ್ ಇನ್ ಎನಿ ಪೋಸ್ಟ್ ಕ್ಯಾರೀಸ್ ಪವರ್ ಅನ್ನಕ್ಕೆ ಮಂಥರೆಗಿಂತ ಸೂಪರ್ ಉದಾಹರಣೆ ಸಿಕ್ಕಲ್ಲ'

'ಒಪ್ಪಿದೆ. ಆದರೂ...'

'ಕೇಳು ಬರ್ಗರ್ ಮೇಯ್ವನೆ, ಸೆಲ್ ಫೋನ್ ಪಾಲ, ನೆಟ್ಟಿನ ಬಾಲ. ಅದೇ ಯುಗದಲ್ಲಿ ಅಹಲ್ಯೆ ಎಂಬ ಓರ್ವ ತರುಣಿ ಇದ್ದಳು. ಅವಳ ಶೀಲವನ್ನು ಅವಳ ಪತಿಯ ರೂಪದಲ್ಲಿ ಬಂದ ಇಂದ್ರನು ಭಂಗ ಮಾಡಿದನು. ಗಂಡ ಬಂದ. ಕೋಪಗೊಂಡ. ಅಹಲ್ಯೆ ಡಿಪ್ರೆಸ್ ಆದಳು, ಕುಳಿತಲ್ಲೇ ಶಿಲೆಯಾದಳು. ಇದು ಏನನ್ನು ಸೂಚಿಸುತ್ತದೆ? ಮೋಸಹೋದ ಹೆಣ್ಣಿನ ಮನಸ್ಸು ಒಮ್ಮೆ ಕಲ್ಲಾದರೆ ಅವಳನ್ನು ಕರಗಿಸಲು ಭಗವಂತನೇ ಇಳಿದು ಬರಬೇಕು ಎಂದು. ಇಲ್ಲಿಯೂ ಹೆಣ್ಣಿನ ಪ್ರೊಟೆಸ್ಟಿಂಗ್ ಪವರ್ ಕಾಣುತ್ತದೆ ನೋಡಯ್ಯಾ. ಎಷ್ಟೋ ಜನ ಗಂಡಸರಿಗೂ ಎಷ್ಟೆಷ್ಟೋ ಮೋಸಗಳಾಗಿವೆ. ಆದರೆ ಯಾರೂ ಕಲ್ಲಾಗಲಿಲ್ಲ. ಏಕೆ? ಪುರುಷರು ಸ್ತ್ರೀಯರಷ್ಟು ಗಟ್ಟಿಯಲ್ಲ ಎಂಬುದೇ ಉತ್ತರ ಕಣಯ್ಯ. ಸೋ... ಸಜೆಷನ್ಸ್ ಇರಲಿ, ಪ್ರೊಟೆಸ್ಟ್ ಇರಲಿ, ಆ ಯುಗದಲ್ಲಿ ಸ್ತ್ರೀಯರೇ ಗ್ರೇಟ್. ತ್ರೇತಾಯುಗ ಸ್ತ್ರೀಪ್ರಧಾನ ಯುಗ'

'ನಾನು ಒಪ್ಪಲ್ಲ. ಗಂಡನ ಶಾಪದಿಂದ ಅವಳು ಕಲ್ಲಾದಳು. ಸೋ... ಅದು ಪುರುಷ ಪ್ರಧಾನವೇ'

'ತಪ್ಪು ತಿಳಿದಿದ್ದೀಯ; ಇಂದ್ರ ಅಯೋಗ್ಯನೇ, ನಿನ್ನದೇನೂ ತಪ್ಪಿಲ್ಲ. ನೀನು ಮತ್ತೆ ಶೀಲೆಯಾಗು ಅಂತ ಗಂಡ ವರ ಕೊಟ್ಟರೆ ಇವಳು, ಮೊದಲೇ ಡಿಸ್ಟರ್ಬ್ಡ್ ಮೈಂಡು, ಶಿಲೆಯಾಗು ಅಂತ ಕೇಳಿಸ್ಕೊಂಡು ಕಲ್ಲಾಗಿಬಿಟ್ಟಳು ಮೈ ಬಾಯ್. ದಿಸ್ ಷೋಸ್ ಒನ್ ಮೋರ್ ಥಿಂಗ್. ಹೆಂಗಸರು ತಮ್ಮ ಗಂಡಂದಿರು ಹೇಳಿದ ಮಾತನ್ನು ಗಮನವಿಟ್ಟು ಕೇಳಿಸಿಕೊಳ್ಳುವುದಿಲ್ಲ!'

'ನಿನ್ನದು ವಿತಂಡವಾದ'

'ಇರಬಹುದು. ನೌ ಲೆಟ್ ಅಸ್ ಡಿಸ್ಕಸ್ ಶೂರ್ಪನಖಿ'

'ಪಾಪ! ಮದುವೆಯಾಗು ಅಂದರೆ ಮೂಗು, ಕಿವಿ ಕೊಯ್ಸಿಕೊಂಡಳು ಅವಳು'

'ನೀನೂ ಸರಿ ಕಣಯ್ಯ; ಅವಳು ಡಯಲ್ ಮಾಡಿದ್ದೇ ರಾಂಗ್ ನಂಬರ್ರು. ರೈಟ್ ಪರ್ಸನ್ ಹೇಗೆ ಸಿಗಕ್ಕೆ ಸಾಧ್ಯ? ಅಂತಹದರಲ್ಲೂ ಲಕ್ಷ್ಮಣ ಅವಳ ರೂಪ ನೋಡಿ 'ಛೆ! ಹೆಣ್ಣು ಇಷ್ಟು ಕುರೂಪಿಯಾಗಿದ್ದರೆ ಮದುವೆ ಆಗುವುದು ಕಷ್ಟ. ಸ್ವಲ್ಪ ಮೂಗು, ಕಿವಿಗಳನ್ನು ಕತ್ತರಿಸಿ ಪ್ಲಾಸ್ಟಿಕ್ ಸರ್ಜರಿ ಮಾಡಿದರೆ ಕೊಂಚ ಲಕ್ಷಣವಾಗಿ ಕಂಡಾಳು' ಎಂದುಕೊಂಡು ಮೂಗು, ಕಿವಿ ಕತ್ತರಿಸಿ. ಸರ್ಜರಿ ಮಾಡುವುದಕ್ಕೆ ಮೊದಲೇ ಅವಳು ಓಡಿಹೋದಳು. ಪೂರ್ ಲಕ್ಷ್ಮಣ. ಪ್ರಪಂಚದ ಮೊಟ್ಟಮೊದಲ ಪ್ಲಾಸ್ಟಿಕ್ ಸರ್ಜನ್ ಅಂತ ಗಿನ್ನೆಸ್ ಬುಕ್ ನಲ್ಲಿ ಸೇರಬೇಕಾಗಿದ್ದನ್ನ ಶೂರ್ಪನಖಿ ತಪ್ಪಿಸಿಬಿಟ್ಟಳು. ಹಾಗೆ ನೋಡಿದರೆ ಪ್ರೊಟೆಸ್ಟಿಂಗ್ ಪವರ್ ನಲ್ಲಿ ಶೂರ್ಪನಖಿ ಈಸ್ ಗ್ರೇಟರ್ ದ್ಯಾನ್ ಅಹಲ್ಯ. ರಾವಣನ ಕಿವಿ ಕಚ್ಚಿ, ಸೀತೆಯನ್ನ ಅಪಹರಿಸಿಸಿ, ಲಕ್ಷ್ಮಣ ಮೂರ್ಛೆ ಬಿದ್ದಾಗ ಡ್ಯಾನ್ಸ್ ಮಾಡುವವರೆಗೆ ಅವಳು ತನ್ನ ಪ್ರೊಟೆಸ್ಟ್ ಮುಂದುವರೆಸಿದಳು. ಸೋ... ತ್ರೇತಾ ವಾಸ್ ಫಾರ್ ವುಮೆನ್. ಐ ರೆಸ್ಟ್ ಮೈ ಕೇಸ್'

ಮುಂದಿನ ಪುಟ ನೋಡಿ ...

‘ತಾಳು. ವಾಟ್ ಎಬೌಟ್ ಸೀತೆ?’

‘ನ್ಯೂಕ್ಲಿಯರ್ ಫ್ಯಾಮಿಲಿಯ ಜನನಿ ಕಣಯ್ಯ ಅವಳು. ಅರಮನೆಯಲ್ಲಿ ಎಷ್ಟೋ ಜನ ರಾಮ ಹೋಗಲಿ, ನೀನು ಇಲ್ಲೇ ಇರು ಅಂದ್ರು. ಊಹೂ. ಒಂದು ಅತ್ತೇನೇ ನಿಭಾಯಿಸೋದು ಕಷ್ಟ, ಇಲ್ಲಿ ಮೂರು ಮೂರು ಅತ್ತೆಯರು. ಕಾಡೋ ಅತ್ತೇಗಿಂತ ಕಾಡೇ ವಾಸಿ ಅಂತ ಹೊರಟೇಬಿಟ್ಟಳಯ್ಯ ಆ ಮಾತೆ. ಕಾಡಲ್ಲೂ ಕಟ್ಟಿಗೆ ತರ್ತಿದ್ದದ್ದು ಲಕ್ಷ್ಮಣ, ಒಲೆ ಹಚ್ತಿದ್ದಿದ್ದು ಲಕ್ಷ್ಮಣ, ಅಡಿಗೆ ಮಾಡ್ತಿದ್ದಿದ್ದು ರಾಮ. ಸೀತೆ ಝುಂ ಅಂತಿದ್ಲಯ್ಯಾ... ಷಿ ವಾಸ್ ದ ಫಸ್ಟ್ ಫ್ಲೈಟ್ ಪ್ಯಾಸೆಂಜರ್. ಪುಷ್ಪಕ ವಿಮಾನದ ಮೊದಲ ಪ್ರವಾಸಿ ಅವಳು. ರಾವಣ ವಾಸ್ ದ ಪೈಲಟ್ ಯೂ ನೋ. ಲಂಕೆಯಲ್ಲೂ ಅವಳನ್ನು ಗಾರ್ಡನ್ ರೆಸಾರ್ಟಲ್ಲೇ ಇರಿಸಿದ್ದು. ಸೀತೆಯನ್ನು ಬೇಸಿಕಲಿ ಎಲ್ಲರೂ ಚೆನ್ನಾಗೇ ನೋಡಿಕೊಂಡರಯ್ಯ. ಕಡೇಲಿ ‘ಸೀತೆಯ ಬಟ್ಟೆಗಳು ಮಲಿನವಾಗಿದೆ’ ಅಂತ ಅಗಸ ಹೇಳಿದ್ದನ್ನ ಕೇಳಿ ಸೀತೆಯೇ ಮಲಿನವಾಗಿದ್ದಾಳೆ ಅಂತ ರಾಮ ತಿಳಿದುಕೊಂಡನಂತೆ. ನಂತರ ನಿಜ ಗೊತ್ತಾದರೂ, ಬೀಯಿಂಗ್ ಡೆಮಾಕ್ರೆಟಿಕ್ ಬೈ ನೇಚರ್ರು ದೋ ಡೈನಾಸ್ಟಿಕ್ ಬೈ ರೂಲು, ಸೀತೆಗೆ ತೊಂದರೆ ಆಗದೆ ಇರಲಿ ಅಂತ ವಾಲ್ಮೀಕಿ ನರ್ಸಿಂಗ್ ಹೋಂ ಎಂಡ್ ಡೇ ಕೇರ್ ಸೆಂಟರ್ ಗೆ ಸೇರಿಸಿ, ನಂತರ ಅವಳು ‘ನೀನು ಬೇಡ, ನಿನ್ನ ಸಹವಾಸಾನೂ ಬೇಡ’ ಅಂದಾಗ ಒಂದು ಬೇಸ್ ಮೆಂಟ್ ನಲ್ಲಿನ ಫ್ಲ್ಯಾಟ್ ತೆಗೆದುಕೊಟ್ಟು ಅವಳು ಸಿಂಗಲ್ ಪೇರೆಂಟ್ ಆಗಿರಕ್ಕೆ ಅನುವು ಮಾಡಿಕೊಟ್ಟನಯ್ಯ. ಸೀತೆಯ ಮನಕ್ಕೆ ನೋವು ಕೊಡುವುದು ರಾಮನಿಗೂ ಇಷ್ಟ ಇರಲಿಲ್ಲ ಕಣಯ್ಯ. ರಾಜನಾದ ಅವನು ಎಲ್ಲವನ್ನೂ ಬಿಡಿಸಿ ಹೇಳದಿದ್ದರೂ ಒಳಗೊಳಗೇ ಸೀತೆಗೆ ಅನುಕೂಲ ಮಾಡಿಕೊಟ್ಟನಯ್ಯ.ಯೂ ಮಸ್ಟ್ ಹ್ಯಾವ್ ಎ ಪ್ರಾಪರ್ ವಿಷನ್ ಟು ವ್ಯೂ ಇಟ್. ಸೀತೆ ವಾಸ್ ಗಿವನ್ ಪ್ರಾಮಿನೆನ್ಸ್, ಹರ್ ವರ್ಡ್ಸ್ ಕ್ಯಾರೀಡ್ ವೇಯ್ಟ್. ತ್ರೇತ ಸ್ತ್ರೀಯರ ಯುಗ’

‘ಸಾಕು ಮಾಡಯ್ಯ, ನಿನ್ನ ನಾನ್ಸೆನ್ಸು. ನಿನ್ನದು ಟ್ವಿಸ್ಟೆಡ್ ರಾಮಾಯಣ’

‘ನಾನು ಬುದ್ಧಿಜೀವಿ ಕಣಯ್ಯ. ಹೀಗೆಲ್ಲಾ ಬರೆಯುವುದು, ಮಾತನಾಡುವುದು ಬುದ್ಧಿಜೀವಿಗಳ ಆಜನ್ಮಸಿದ್ಧ ಹಕ್ಕು!’

‘ಎನಿವೇ, ಸಾಕು ಮಾಡು ನಿನ್ನ ಈ ರಾಮಾಯಣ’

‘ಓಕೆ. ಕಮಿಂಗ್ ಟು ಮಹಾಭಾರತ...’

‘ಒಂದೇ ಕ್ಯಾರೆಕ್ಟರ್ ಬಗ್ಗೆ ಹೇಳು ಸಾಕು’

‘ಸೋ ಬಿ ಇಟ್.’

‘ದ್ರೌಪದಿಗೆ ಐದು ಜನ ಗಂಡಂದಿರು. ತಪ್ಪಲ್ವಾ?

‘‘ಎಲಿಝಬೆತ್ ಟೈಲರ್ ಗೆ ಒಂಬತ್ತು ಮದುವೆ, ಎಂಟು ಗಂಡಂದಿರು. ಇದು ತಪ್ಪಿಲ್ಲ ಅಂದರೆ ಅದೂ ತಪ್ಪಲ್ಲ!’

‘ಅವಳನ್ನು ಪಣಕ್ಕೆ ಒಡ್ಡಿದ್ದು?’

‘ಎ ವೈಫ್ ಈಸ್ ದ ಗ್ರೇಟೆಸ್ಟ್ ಅಸೆಟ್ ಅನ್ನೋದನ್ನ ಇದು ಪ್ರೂವ್ ಮಾಡತ್ತೆ. ಲುಕ್ ಎಟ್ ದಿ ಫ್ಲಿಪ್ ಸೈಡ್. ದ್ರೌಪದಿ, ಭೀಮ ಒಂದು ಕಡೆ ಕೂತಿದ್ರು. ಎಲ್ಲಿಂದಲೋ ಒಂದು ಹೂ ಬಿತ್ತು. ನನಗದು ಬೇಕೇ ಬೇಕು ಅಂತ ಅವಳು ರಚ್ಚೆ ಹಿಡಿದಳು. ಭೀಮ, ಪಾಪ, ಒಂದು ಹೂವಿಗಾಗಿ ಹುಚ್ಚಾಪಟ್ಟೆ ಅಲೆದು, ಕಡೆಗೆ ನಂದನವನದವರೆಗೂ ಹೋಗ್ಬೇಕಾಯ್ತು. ಅಷ್ಟೇ ಅಲ್ಲ, ಅವಳು ತನ್ನ ತಲೆ ಬಾಚಿಕೊಳ್ಳಲು ದುಶ್ಯಾಸನ ಬ್ರ್ಯಾಂಡ್ ಮೂಳೆ ಬಾಚಣಿಗೆ, ಅದೇ ಬ್ರ್ಯಾಂಡ್ ಬ್ಲಡ್ ರೆಡ್ ಶಾಂಪೂ ಬೇಕು ಅಂತ ಹಠ ಹಿಡಿದಾಗ ಹನ್ನೊಂದು ಅಕ್ಷೋಹಿಣಿ ಸೈನ್ಯ ಕೊಂದು ಬಾಚಣಿಗೆ, ಶಾಂಪೂ ಕೊಟ್ಟರು ಪಾಂಡವರು. ಹೆಣ್ಣಿನ ಮಾತೇ ನಡೆಯುತ್ತಿತ್ತು ದ್ವಾಪರದಲ್ಲೂ ಅನ್ನಕ್ಕೆ ಇನ್ನೇನು ಉದಾಹರಣೆ ಬೇಕು ಹೇಳು? ಸೋ... ದ್ವಾಪರ ಟೂ ವಾಸ್ ಎ ಸ್ತ್ರೀಯುಗ’

‘ಕಲಿಯುಗ?’

‘ಕನ್ನಡ ವ್ಯಾಕರಣವೇ ಹೇಳತ್ತಲ್ಲ! ಪತಿಯ ಮಾತುಗಳಿಗೆ ನಕಾರದ ಒತ್ತು ಕೊಟ್ಟರೆ ಪತ್ನಿ! ಕನ್ನಡ, ಹಿಂದಿ, ಇಂಗ್ಲಿಷ್ ಎಲ್ಲ ಡಿಕ್ಷ್ನರಿಗಳಲ್ಲೂ ಗಂಡು ಹಿಂದು, ಹೆಣ್ಣು ಮುಂದು. ಹೆಚ್ ಆದಮೇಲೆಯೇ ಡಬ್ಲ್ಯೂ ಬರೋದು. ಅಂದರೆ... ಹೆಣ್ಣನ್ನು ಗಂಡು ಫಾಲೋ ಮಾಡೋದು ನಡೆಯಲ್ಲಷ್ಟೇ ಅಲ್ಲ, ನುಡಿಯಲ್ಲೂ ಇದೆ! ವಾಟ್ ಐ ಮೀನ್ ಟು ಸೇ ಈಸ್, ಮಾರ್ಚ್ ಎಂಟರ ಮಹಿಳಾದಿನ ಈಸ್ ಜಸ್ಟ್ ಎ ಸಿಂಬಾಲಿಕ್ ರೆಪ್ರೆಸೆಂಟೇಷನ್ ಆಫ್ ಮಹಿಳಾ ಯುಗ. ಆದರೂ ಈ ಡೇಟ್ ಸಿಂಬಾಲಿಕ್ ಆಗಿದೆ’

‘ಹೇಗೆ?’

‘ದಿನವೂ ನೀವು ಮಾರ್ಚ್ ಮಾಡಿದರೆ, ಅರ್ಥಾತ್ ವಾಕ್ ಮಾಡಿದರೆ, ನಿಮ್ಮ ಫಿಗರ್ 8 ತರಹ ಆಗತ್ತೆ ಅಂತ! ಹೆಣ್ಣಿಗೆ ಬೇಕಾದ್ದೂ ಅದೇ ಆದ್ದರಿಂದ ಈ ಡೇಟೇ ರೈಟ್. ಬೈ ದಿ ಬೈ, ನಾನು ಹೊರಟೆ, ಐ ಮಸ್ಟ್ ಬಿ ರಷಿಂಗ್...’

‘ಎಲ್ಲಿಗೆ?’

‘ಹೆಂಡತಿಯನ್ನು ಷಾಪಿಂಗಿಂದ ಪಿಕಪ್ ಮಾಡ್ಬೇಕು. ಇಲ್ಲದಿದ್ದರೆ ವುಮೆನ್ಸ್ ಡೇ ನನಗೆ ಆದೀತು ಬ್ಲ್ಯಾಕ್ ಡೇ... ಬೈ.... ▪

ಕಥಾ ಚೆಲುಮೆ

ಬೆಂಕಿ - ಗಾಳಿ !

ಲೇಖಕರು: ಕನಕಾಪುರ ನಾರಾಯಣ

ಚೀನಾ ದೇಶದ ಒಂದು ಹಳ್ಳಿಯಲ್ಲಿ ಒಬ್ಬ ಮುದುಕಿ ಇದ್ದಳು, ಆಕೆಗೆ ಇಬ್ಬರು ಗಂಡು ಮಕ್ಕಳು. ಅವರಿಗೆ ಮದುವೆಯೂ ಆಗಿತ್ತು. ಅವಳ ಸೊಸೆಯರು ತಮ್ಮ ತವರೂರಿಗೆ ಹೋಗಿ ಬರಲು ಅತ್ತೆಯ ಬಳಿ ಕೋರಿಕೊಂಡರು. ಸುಲಭವಾಗಿ ಒಪ್ಪುವ ಅತ್ತೆ ಅವಳಲ್ಲ. ಗಂಡುಮಕ್ಕಳ ಮಾತಿಗೆ ಅವರ ಮನೆಯಲ್ಲಿ ಬೆಲೆಯಿಲ್ಲ. ಮುದುಕಿಯದೆ ಮೇಲುಗೈ. ಮುದುಕಿಗೆ ಅವರನ್ನು ಕಳಿಸಲು ಇಷ್ಟವಿರಲಿಲ್ಲ."ನೀವು ನಿಮ್ಮ ಅಮ್ಮನ ಮನೆಗೆ ಹೋಗಿ ಬರಲು ನನಗೆ ಅಭ್ಯಂತರವಿಲ್ಲ ಆದರೆ ಹಿಂತಿರುಗಿ ಬರುವಾಗ ದೊಡ್ಡ ಸೊಸೆ ಕಾಗದದಲ್ಲಿ ಸುತ್ತಿಟ್ಟ ಬೆಂಕಿಯನ್ನೂ, ಚಿಕ್ಕ ಸೊಸೆ ಕಾಗದದಲ್ಲಿ ಸುತ್ತಿಟ್ಟ ಗಾಳಿ ಈ ಎರಡೂ ಉಡುಗೊರೆಯನ್ನು ತರಬೇಕು, ಇಲ್ಲದಿದ್ದರೆ ಇಲ್ಲಿಗೆ ಬರಲೇಬೇಡಿ"ಎಂದು ಶರತ್ತು ಹಾಕಿದಳು.

ಬೆಂಕಿ ಗಾಳಿ ಇದ್ಯಾವಸಿಮೆ ಉಡುಗೊರೆ? ಇಬ್ಬರಿಗೂ ತಲೆ ಕೆರೆದುಕೊಳ್ಳುವಹಾಗಾಯ್ತು, ಆದರೂ ತಮ್ಮ ತವರೂರಿಗೆ ಹೋಗುವ ತವಕದಲ್ಲಿ ಅವರೂ ಸಹ ಅದಕ್ಕೆ ಒಪ್ಪಿ ಹೊರಟರು. ಊರಿನಲ್ಲಿ ತಮ್ಮ ನಂಟರೂ ಇಷ್ಟರೂ ಎಲ್ಲರೊಡನೆ ಸಂತೋಷದಿಂದ ಕಾಲ ಕಳೆದು ಹಿಂತಿರುಗಿ ಬರುವಾಗ ಅವರಿಗೆ ಅತ್ತೆ ಹೇಳಿದ್ದ ಮಾತು ನೆನೆಪಿಗೆ ಬಂದಿತು. ತಲೆಯ ಮೆಲೆ ಕೈಯಿಟ್ಟು ಆಲೋಚನೆ ಮಾಡುತ್ತಾ ಕುಳಿತರು.ಆ ವೇಳೆಗೆ ಸರಿಯಾಗಿ ವಾಂಗ್ ಚೂ ಎನ್ನುವ ಜಾಣ ರೈತ ಅವರನ್ನು ಕಂಡು,ಅವರ ಕಷ್ಟ ವಿಚಾರಿಸಿದ.ಸ್ವಲ್ಪ ಕಾಲ ಆತನೂ ಆಲೋಚಿಸಿ ನಂತರ ಜಾಣ್ಮೆಯಿಂದ ಅವರಿಗೆ ಬೇಕಿದ್ದ ಉಡುಗೊರೆಗಳನ್ನು ಅವರ ಕೈಗಿಟ್ಟ. ಅದನ್ನು ಸಂತೋಷದಿಂದ ತಂದು ಸೊಸೆಯರು ಅತ್ತೆಗೆ ಒಪ್ಪಿಸಿದರು. ಮುದುಕಿಗೆ ಆಶ್ಚರ್ಯ, ಯಾವ ಕೆಲಸವು ಅಸಾಧ್ಯ ಎಂದುಕೊಂಡಿದ್ದಳೋ ಅದು ಸೊಸೆಯರಿಗೆ ಸುಲಭವಾಗಿ ಸಾಧ್ಯವಾಯಿತು. ಆದರೆ ಅವರಿಗೆ ಸಹಾಯ ಮಾಡಿದ ವಾಂಗ್ ಚೂ ವಿಚಾರ ಮುದುಕಿಯ ಬಳಿ ಬಾಯಿ ಬಿಡಲಿಲ್ಲ. ವಾಂಗ್ ಚೂ ದೊಡ್ಡ ಸೊಸೆಗೆ ಕಾಗದದಲ್ಲಿ ಸುತ್ತಿಟ್ಟ ಬೆಂಕಿಗೆ - ಚೈನೀಸ್ ಲಾಟೀನ್ ಮತ್ತು ಚಿಕ್ಕ ಸೊಸೆಗೆ ಕಾಗದದಲ್ಲಿ ಸುತ್ತಿಟ್ಟ ಗಾಳಿಗೆ - ಕೈ ಬೀಸಣಿಗೆ ಕೊಟ್ಟಿದ್ದ..▪

ನಿಂಬೆಕಾಯಿ ಸಾರು

ಬೇಕಾಗುವ ಸಾಮಗ್ರಿಗಳು

- ಮೂರು ನಿಂಬೆಹಣ್ಣು, ಒಂದು ಬಟ್ಟಲು ತೊಗರಿಬೇಳೆ, ಎರಡು ಮಾಗಿದ ಟೊಮಾಟೋ ಹಣ್ಣು
- ಎರಡು ಹಸಿ ಮೆಣಸಿನ ಕಾಯಿ, ಮೂರು ಕೆಂಪು ಮೆಣಸಿನ ಕಾಯಿ
- ಕಡ್ಲೇ ಬೇಳೆ ಕೊತ್ತಂಬರಿ ಬೀಜ ತಲಾ ಒಂದು ಚಮಚ
- ಜೀರಿಗೆ,ಮೆಣಸು,ಅರಿಶಿನ,ಸಾಸಿವೆ ತಲಾ ಅರ್ಧ ಚಮಚ
- ಒಗ್ಗರಣೆಗೆ ಚಿಟಿಕೆ ಇಂಗು, ಎಣ್ಣೆ, ಕರಿಬೇವು, ರುಚಿಗೆ ತಕ್ಕಷ್ಟು ಉಪ್ಪು

ಮಾಡುವ ವಿಧಾನ

- ಬೇಳೆಯನ್ನು ಅರಿಶಿನ ಬೆರೆಸಿ ಬೇಯಿಸಿ ಚೆನ್ನಾಗಿ ತಿರುವಿ ಇಡಿ
- ಹುರಿದ ಒಣ ಮೆಣಸಿನ ಕಾಯಿ, ಕೊತ್ತಂಬರಿ ಬೀಜ, ಕಡ್ಲೇಬೇಳೆ, ಮೆಣಸು, ಜೀರಿಗೆ, ಇಂಗು ಎಲ್ಲಾ ಒಣಗಿಸಿ ಕುಟ್ಟಿ ಅಥವಾ ಮಿಕ್ಸಿಯಲ್ಲಿ ಪುಡಿ ಮಾಡಿಕೊಳ್ಳಿ
- ಎರಡು ಬಟ್ಟಲು ನೀರು ಕುದಿಸಿ ಅರಿಶಿನ ಹೆಚ್ಚಿದ ಟೊಮಾಟೋ,ಕತ್ತರಿಸಿದ ಹಸಿ ಮೆಣಸಿನ ಕಾಯಿ ಉಪ್ಪು ಹಾಕಿ ಬೇಯಿಸಿ
- ನೀರು ಕುದಿಯುವಾಗ ಬೇಳೆ ಬೆರೆಸಿ ಎರಡು ಬಾರಿ ತಿರುವಿ ರುಬ್ಬಿದ ಪುಡಿ ಬೆರೆಸಿ ಕುದಿಸಿ
- ನಿಂಬೆ ರಸವನ್ನು ಬೆರೆಸಿದ ನಂತರ ಸಾಸಿವೆ ಕರಿಬೇವು ಒಗ್ಗರಣೆ ಹಾಕಿ ಒಲೆಯಿಂದಿಳಿಸಿ

ಇನ್ನೂ ನೂರಾರು ರೆಸಿಪ್ಪಿಗಳಿಗೆ www.sugamakannada.com ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಇದೇನ್ಲಾ ಇದು

೧. ಚಿಪ್ಪುಂಟು ಆಮೆಯಲ್ಲ, ಜುಟ್ಟುಂಟು ಪೂಜಾರಿಯಲ್ಲ
೨. ಬಾಲ್ಯದಲ್ಲಿ ಹಸಿರು, ಪ್ರಾಯದಲ್ಲಿ ಹಳದಿ, ಮುಪ್ಪಿನಲ್ಲಿ ಕಪ್ಪು, ಹೆಣ್ಣಲ್ಲ ನಾನು ಹಣ್ಣು

ಉತ್ತರಕ್ಕೆ ಪುಟ ೧೨ ನೋಡಿ

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

Contact Mr Sudheendra Rao EMAIL
Mobile 0415 291 723

Contact Mr.Sathya Bhat EMAIL
Mobile 0412 918 511

Contact Mr Umesh EMAIL
Mobile 0401 034 456

Contact Mr Eranna Gotyal EMAIL
Mobile 0404 215 605

ಆಶಾಭಾವ ...

ಮುಗಿಲಿನಿಂದ ಸುರಿದ ನೀರು
ಹರಿಯದಿರುವುದೆ
ತೊರೆಯ ಸೇರದಿರುವುದೇ

ಬಿರಿದ ಹೂವಿಗೊಂದು ದುಂಬಿ
ಬಾರದಿರುವುದೆ
ಮಧುವ ಹೀರದಿರುವುದೇ

ಬೆಳೆದ ಹುಡುಗಿಯಲ್ಲಿ ಒಲವು
ಮೂಡದಿರುವುದೆ
ಬಿಡದೆ ಕಾಡದಿರುವುದೇ

ನಾಕದಲ್ಲೇ ನಿಧಿತಗೊಂಡ
ಏಕಮೇವ ಸಖನ ವಿಧಿಯು
ತೋರದಿರುವುದೆ
ಸುಖವ ತಾರದಿರುವುದೇ ▪

ರಚನೆ: ಮಾಲು (ಅಡಿಲೈಡ್)

ಒಲವಿನ ಸವಿರುಚಿ

ಅಡುಗೆ ಮನೆಯಲಿ ಏನಿದೆ,
ಘಮ ಘಮ ಪರಿಮಳ ಬರುತಿದೆ

ಸಾರೋ ಕೂಟೋ ಮಜ್ಜಿಗೆ ಹುಳಿಯೋ,
ಪಲ್ಯವೊ ಗೊಜ್ಜೋ, ತಂಬುಳಿಯೋ.

ಇಂಗು ತೆಂಗುಗಳು, ಚಕ್ಕೆ ಮೊಗ್ಗುಗಳು,
ಒರಳೊಳಗೇ ಒಂದಾಗಿದೇ,

ಮೆಣಸು ಜೀರಿಗೆ, ಮೆಂತ್ಯ ಧನಿಯವು,
ಹದವಾಗೀ ತಿರುವಾಗಿದೆ,

ಉಪ್ಪೂ ಹುಳಿಯನು ಕೂಡಿಸಿ ಕುದಿಸಲು,
ಅಂತಿಮ ಹಂತವ ತಲುಪಿದೆ.

ಒಲೆಯ ಮೇಲಿನ ಬಾಣಲೆಯಲ್ಲಿ
ಎಣ್ಣೆಯು ಕಾದು ಕುಳಿತಿದೆ,

ಸಾಸಿವೆ ಕಾಳು ಸಿಡಿಯುತ ಜೊತೆಗೆ
ಕರಿಬೇವಿನ ಎಸಳನು ಕರೆದಿದೆ.

ತಟ್ಟೆಯ ಸದ್ದಿಗೆ ಹೊಟ್ಟೆಯು ಕಾದು
ಸಹನೆಯ ಕಟ್ಟೆಯು ಒಡೆದಿದೆ.

ಅಡುಗೆ ಮನೆಯಲಿ ಏನಿದೆ,
ಕೈ ಬಳೆಗಳ ಸದ್ದೂ ಕೇಳಿದೆ,

ಅಕ್ಕನೊ ತಂಗಿಯೊ ಮಡದಿಯೊ ತಾಯಿಯೊ,
ಒಲುಮೆಯು ತುಂಬಿದ ಹೆಣ್ಣಿದೆ,

ಒಲವಿನ ಹೃದಯದ ಸಾರವು ಬೆರೆತೂ,
ಅಡುಗೆಗೆ ರುಚಿಯನು ತಂದಿದೆ ▪

ರಚನೆ: ನಾಗಶೈಲ ಕುಮಾರ್ (ಸಿಡ್ನಿ)

ಹಾಸ್ಯ ಚಿಲುಮೆ

ಹೆಂಡತಿ: ಏನ್ರಿ ದಿನಾ ಈ ಥರ ಅಡುಗೆ ಮಾಡಿದ್ರೆ ನನಗೇನ್ ಸಿಗತ್ತೆ?
ಗಂಡ: LIC ಇನ್ಶುರನ್ಸ್ ಹಣ ಸಿಗತ್ತೆ.

ಹೆಂಡತಿ: ರೀ ಏಳ್ರೀ ಬೇಗಾ !
ಗಂಡ: ಏನಾಯ್ತೇ? ರಾತ್ರಿ ಎರಡು ಗಂಟೆಗೆ ಎಬ್ಬಿಸ್ತಾ ಇದ್ದೀಯಾ?
ಹೆಂಡತಿ: ನೀವು ನಿದ್ದೆ ಮಾತ್ರೆ ತೊಗೋಳ್ಳೋದು ಮರೆತಿದ್ದೀರಿ

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಜಾಣ ಕರ್ನಾಟಕ

೧. ಕನ್ನಡಿಗರ ಕಣ್ಮಣಿ, ಪರಿಸರ ಪ್ರೇಮಿ, ಸಾಲುಮರದ ತಿಮ್ಮಕ್ಕನವರು ಇತ್ತೀಚೆಗೆ ತಮ್ಮ ಎಷ್ಟನೇ ಹುಟ್ಟಿದದಿನವನ್ನು ಆಚರಿಸಿಕೊಂಡರು? ಇವರು ೫೦ ವರ್ಷಗಳ ಹಿಂದೆ ತಮ್ಮ ಪತಿಯೊಡನೆ ನೆಟ್ಟ ರಸ್ತೆ ಬದಿಯ ಮರಗಳ ಸಂಖ್ಯೆ ಎಷ್ಟು?

೨. ಕರ್ನಾಟಕದ ಖ್ಯಾತ ಪರಿಸರ ಛಾಯಾ ಚಿತ್ರಕಾರ ಜೋಡಿ ಯನ್ನು ಕುಖ್ಯಾತ ಕಾಡುಗಳ್ಳ ವೀರಪ್ಪನ್ ಅಪಹರಿಸಿದ್ದ. ಈ ಜೋಡಿ ಯಾರೆಂದು ನಿಮಗೆ ಗೊತ್ತೆ? ಎಷ್ಟು ದಿನಗಳ ಕಾಲ ಇವರು ಅಪಹರಣದಲ್ಲಿದ್ದರು?

ಸರಿ ಉತ್ತರಕ್ಕೆ ಪುಟ ೧೭ ನೋಡಿ

ಇದೇನ್ಲಾ ಇದು – ಉತ್ತರ

೧. ತೆಂಗಿನಕಾಯಿ

೨. ಬಾಳೇಹಣ್ಣು

ಸಕಲ ಕಲಾ ವಲ್ಲಭೆ

ಲೇಖಕರು: ಸ್ಮಿತಾ ಮೇಲ್ಕೋಟೆ

ಎಲ್ಲೇ ಹೋಗಿದ್ದೀಯಾ ... ಬೆಳಿಗ್ಗೆ ಇಂದ ನನಗೊಂದು ಲೋಟ ಕಾಫಿ ಕೂಡ ಕೊಟ್ಟಿಲ್ಲ ... ಇಬ್ಬರಿಗೂ ಆಫೀಸ್ ಗೆ ಬೇರೆ ಲೇಟ್ ಆಗ್ತಾ ಇದೆ. ಮನೆ ಬೇರೆ ಯಾಕೋ ನಿಶ್ಯಬ್ದವಾಗಿದೆ. ಇದೇನು ನನ್ನ ಮುಂಚೆನೇ ಇವಳು ಆಫೀಸ್ ಕಡೆ ಹೊರಟು ಹೋದಳೇ? ದಿನ ನಿತ್ಯದ ಪ್ರಕಾರ ನನಗೆ ಕಾಫಿ ಕೊಟ್ಟು ಎಬ್ಬಿಸಿ, ಆಮೇಲೆ ಬೇರೆ ಕೆಲಸದ ಕಡೆ ನೋಡುತಿದ್ದವಳಿಗೆ, ಅಂಥದೇನು ಅವಸರದ ಕೆಲಸ ಇರಬಹುದು? ಹುಷಾರಿಲ್ಲದೆ ಮಲಗಿದ್ದಾಳಾ? ಮನೆಯೆಲ್ಲಾ ಹೆಂಡತಿಗೆ ಹುಡುಕಿದ ಗಂಡ ಉಸ್ಸಪ್ಪಾ ಅಂತ ಸೋಫಾ ಮೇಲೆ ಕುಕ್ಕರಿಸಿದ. ಹಾಗೆ ತೂಕಡಿಕೆ ಬಂದ ಹಾಗಾಗಿ ಕಣ್ಣು ಮುಚ್ಚಿ ಒರಗಿದ.

ಏನ್ರೀ ನೋಡಿ, ನಾನು ಬಂದಿದ್ದೀನಿ, ಬೆಳಿಗ್ಗೆಯಿಂದ ಹುಡುಕಿ ಹುಡುಕಿ ಸಾಕಾಗಿ ಮತ್ತೆ ಮಲಗಿ ಬಿಟ್ಟರಾ ... ಒಮ್ಮೆ ಕಣ್ಣು ಬಿಟ್ಟು ನೋಡಿ ... ಗಂಡ ನಿಧಾನವಾಗಿ ಕಣ್ಣು ಉಜ್ಜಿಕೊಂಡು ನೋಡುತ್ತಾನೆ ... ಶಕ್ತಿ ದೇವತೆಯ ಹಾಗೆ ಆರು ಕೈಗಳು, ಒಂದೊಂದೂ ಏನೇನೋ ಹಿಡಿದುಕೊಂಡಿದೆ, ಮುಖ ನೋಡುತ್ತಾನೆ, ಅನುಮಾನವೇ ಇಲ್ಲ, ಅವಳೇ ನನ್ನ ಪ್ರಾಣ ಪ್ರಿಯ ಪತ್ನಿ. ಅಯ್ಯೋ ಏನೇ ಆಯಿತು ನಿಂಗೆ ... ಇದೇನೇ ಇಷ್ಟೊಂದು ಕೈಗಳು ... ರೀ ನೋಡ್ರೀ ನಾನು ಮಾಡೋ ಕೆಲಸಗಳಿಗೆ ನನ್ನ ಎರಡು ಕೈಗಳು ಏನೇನು ಸಾಲದು ಎಂದು, ದೇವರ ಮನೇಲಿ ಕೂತು ಪ್ರಾರ್ಥನೆ ಮಾಡುತ್ತಾ, ನಂಗೂ ಒಂದಾರು ಕೈಯ್ಗಳು ಇದ್ದಿದ್ದರೆ ಚೆನ್ನಿತ್ತು ಅಂತ ಅಂದುಕೊಂಡೆ ನೋಡಿ, ದೇವರು ತಕ್ಷಣವೇ ವರ ದಯಪಾಲಿಸಿಬಿಟ್ಟಿದ್ದಾನೆ.

"ಅಯ್ಯೋ ಹೌದಾ ಸ್ವಲ್ಪ ವಿಚಿತ್ರವಾಗಿ ಕಂಡರೂ ನಿನಗೆ ಅನುಕೂಲ ಆಗೋ ಹಾಗಿದ್ರೆ ಇರಲಿ ಬಿಡು . ಅದು ಸರಿ ನಿನ್ನ ಆರು ಕೈಗಳನ್ನು ಹೇಗೆ ಉಪಯೋಗಿಸಬೇಕೆಂದು ಗೊತ್ತುಂಟೋ?"

ನನ್ನ ಬಲಗೈಯಿ ಪಾಪುಗೆ ಮೀಸಲು. ಯಾವಾಗಲು ಎತ್ತಿಕೊಂಡೇ ಇರಬೇಕು. ಬಿಟ್ಟಿರಕ್ಕೆ ಆಗಲ್ಲ. ಇನ್ನೊಂದು ಕೈಯ್ಗೆ ನನ್ನ ಪ್ರೀತಿಯ ಸ್ಮಾರ್ಟ್ ಫೋನ್, ನನ್ನ ಗೆಳತಿಯರ ಜೊತೆ ಹರಟುವುದಕ್ಕೆ, ಮೆಸೇಜ್ ಮಾಡುವುದಕ್ಕೆ ಬೇಕಾಗುತ್ತೆ. ನಿಮಗೆ ಗೊತ್ತೇ ಇದೆ ನನ್ನ ಓದಿನ ಗೀಳು, ಇನ್ನೊಂದು ಕೈಗೆ ಪುಸ್ತಕಗಳು ಅಲಂಕರಿಸುತ್ತವೆ. ಇನ್ನೊಂದು ಕೈಯನ್ನು ನನ್ನ ಸ್ವಂತ ಕೆಲಸಗಳಿಗೆ ಮೀಸಲಾಗಿಡುತ್ತೇನೆ. ಉಳಿದ ಕೈಗಳು ಆಫೀಸ್ ಕಂಪ್ಯೂಟರ್ ಚಾಲೂ ಮಾಡಕ್ಕೆ ಬೇಕು . ಮದುವೆ ಆದಾಗಿನಿಂದ ಆಟ ಆಡೋದೇ ಮರೆತು ಹೋದ ಹಾಗಿದೆ, ಇನ್ನೊಂದು ಕೈ ಆಟ ಓಟಕ್ಕೆ!!!

ಇದೇನೇ ನಿನ್ನ ಸ್ವರೂಪ, ವ್ಯಕ್ತಿತ್ವಾನೇ ಬದಲಾದ ಹಾಗಿದೆ ಇಷ್ಟೊಂದು ಕೈಯ್ಗಳು ಬಂದ ಮೇಲೆ. ಅಡಿಗೆ ತಿಂಡಿ ಮನೆ ಕೆಲಸ ಯಾರು ನೋಡುತ್ತಾರೆ. ಹೋಗಲಿ ದೇವರನ್ನು ಇನ್ನೊಂದು ಎರಡು ಹೆಚ್ಚಾಗಿ ಕೇಳಿಕೊಂಡಿದ್ದರೆ ನಿನ್ನ ಗಂಟು ಏನು ಹೋಗುತಿತ್ತು . ಅಡಿಗೆಗೆ ನಿಮ್ಮ ಕೈಯ್ಗಳನ್ನು ನನಗೆ ಕೊಟ್ಟಿದ್ದಾನೆ ಸಾಲದೇ!!! ನಳ ಪಾಕದ ರುಚಿ ತೋರಿಸಿ!! ರೀ ಇವತ್ತು ವಿಶ್ವ ಮಹಿಳಾ ದಿನ ... ನಾನು ಮನೆಯಲ್ಲಿ ಯಾವ ಕೆಲಸ ಮಾಡಕ್ಕೆ ಆಗಲ್ಲ. ನಮ್ಮ ಕಚೇರಿಯ ಎಲ್ಲ ಹೆಣ್ಣು ಮಕ್ಕಳೂ ಸೇರಿ, ಸ್ತ್ರೀ ದೌರ್ಜನ್ಯ, ಪುರುಷ ಪ್ರಧಾನ ಸಮಾಜದ ತಡೆ ಹೇಗೆ ಮಾಡುವುದು ಅಂತ ಚರ್ಚೆ ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳುವ ಕಾರ್ಯಕ್ರಮ ಇದೆ. ನನ್ನ ತಿಂಡಿ ಸ್ವಲ್ಪ ಬೇಗ ಕೊಟ್ಟು ಬಿಡುತ್ತೀರಾ ... ಸಮಯ ಮೀರುತ್ತಾ ಇದೆ. ನಾನು ನವ ಸ್ತ್ರೀ ಸಮಾಜದ ನಿರ್ಮಾಣದ ಕೆಲಸಗಳನ್ನು ನೋಡಿಕೊಳ್ಳಬೇಕು .

ಅಲ್ಲ ಕಣೆ, ಈಗಾಗಲೇ ನಿಮ್ಮ ಹೆಣ್ಣು ಕುಲ ಎಲ್ಲ ಕ್ಷೇತ್ರದಲ್ಲೂ ಕಾಲಿಟ್ಟಾಗಿದೆ, ರಾಜಕೀಯ, ವೈದ್ಯಕೀಯ, ಪೋಲೀಸ್ ವೃತ್ತಿ, ವಕೀಲ ವೃತ್ತಿ, ಸರಕಾರೀ ಕಚೇರಿ, ವಿಮಾನಯಾನ, ಸಾಲದಕ್ಕೆ, ಬಸ್ ಡ್ರೈವರ್, ಆಟೋ ಓಡಿಸುವುದು, ಪೆಟ್ರೋಲ್ ಸ್ಟೇಶನ್ಗಳಲ್ಲಿ ಕೂಡ ಹೆಣ್ಣೇ ಕಾಣಿಸುತ್ತಾ ಇದ್ದಾರೆ. ಇನ್ನೆಂಥಾ ಹೊಸ ಸಮಾಜದ ನಿರ್ಮಾಣ ಮಾಡುತ್ತೀರಿ, ಎಲ್ಲಾ ಕ್ಷೇತ್ರದಲ್ಲಿಯೂ ಹೆಣ್ಣುಗಳ ಜೊತೆ ಸ್ಪರ್ಧೆಗಿಳಿಯಬೇಕು ನಾವು . ಗಂಡುಗಳಿಗೆ ಕೆಲಸ ಸಿಗುವುದು ಕಷ್ಟ ಆಗಿಬಿಟ್ಟಿದೆಯಲ್ಲೇ!!! ಅದು ಬಿಡು, ಮದುವೆ ಆಗೋಣ ಎಂದರೆ ಒಂದು ಹುಡುಗಿಯೂ ಒಪ್ಪುವುದಿಲ್ಲವಲ್ಲೇ, ನೂರೆಂಟು ಪ್ರಶ್ನೆಗಳು, ಅವರ ಷರತ್ತುಗಳ ಸುರಿಮಳೆ, ನೋಡಿದರೆ ಬ್ರಹ್ಮಚಾರಿ ಪಟ್ಟವೇ ವಾಸಿ ಎನಿಸುತ್ತಲ್ಲೇ??

ನೀವು ಹೇಳುವುದು ಎಲ್ಲಾ ಒಪ್ಪುತ್ತೇನೆ, ನಮ್ಮ ಹೆಣ್ಣು ಕುಲ ಇಷ್ಟು ಮುಂದುವರಿದಿರುವುದು ಸಂತೋಷವೇ ... ಆದರೆ ಹೆಣ್ಣನ್ನು ನೋಡುವ ಧೋರಣೆ ಸರಿಯಿಲ್ಲ. ಅವಳು ಎಲ್ಲರಿಗೂ ದುಡಿಯುವುದು ಅದನ್ನು ಎಲ್ಲರೂ ತಮ್ಮ ಲಾಭಕ್ಕೆ ಉಪಯೋಗಿಸುತ್ತಾ ಬಂದಿದ್ದಾರೆ . ಅದನ್ನು ನಾವು ಸರಿ ಮಾಡಬೇಕು. ಸಮಾನತೆಯ ಪಟ್ಟವನ್ನು ಕೇಳಿ ಕಿತ್ತುಕೊಳ್ಳುವುದಕ್ಕಿಂತ, ಅದನ್ನು ನಮಗೆ ಸಂತೋಷವಾಗಿ ಕೊಟ್ಟರೆ ಇನ್ನೂ ಹೆಚ್ಚಿನ ಆನಂದ, ಸೂಕ್ತ ಅಲ್ಲವೇ ... ಅದು ಅಕ್ಷರಶಃ ನಿಜ ಮಾರಾಯ್ತಿ ... ನಿನಗೆ ನಮೋ ನಮಃ!!

ರೀ... ರೀ... ಬೇಗನೆ ಎದ್ದು ಇಲ್ಲಿ ಬಂದು ಸೋಫಾ ಮೇಲೆ ಒರಗಿ ಮತ್ತೆ ನಿದ್ದೆ ಮಾಡಿ ಕನಸು ಕಾಣುತ್ತಿದ್ದೀರಾ??? ನಿಮ್ಮ ತಿಂಡಿ, ಊಟ ಎಲ್ಲ ಟೇಬಲ್ ಮೇಲೆ ರೆಡಿ ಆಗಿದೆ, ಬೇಗ ತಿಂದು ನನ್ನನ್ನೂ ಆಫೀಸ್ ಗೆ ಡ್ರಾಪ್ ಮಾಡಬೇಕು!!

ಲೇ ಇವಳೇ ಇವತ್ತು ವಿಶ್ವ ಮಹಿಳಾ ದಿನ, ನೀನು ಏನು ಹೇಳುತ್ತಿಯೋ ಹಾಗೆ ಮಾಡುತ್ತೇನೆ ಪ್ರಚಂಡ ಶಕ್ತಿ ದೇವತೆ!!. ದೇವತೆ ಪಟ್ಟ ಬೇಡ ರಾಯರೇ, ವರ್ಷದಲ್ಲಿ ಒಂದು ದಿನಾ ಮಹಿಳಾ ದಿನ ಅಂತ ಜೋರಾಗಿ ಭಾಷಣ ಬಿಗಿದು, ಬೇರೆ ದಿನಗಳಲ್ಲಿ ನಮ್ಮ ಹತ್ತಿರ ದುಡಿಸುಕೊಳ್ಳುವುದಿಲ್ಲ ಅಂತ ಏನು ಗಾರಂಟೀ?

ಖಂಡಿತ ಹಾಗಾಗುವುದಕ್ಕೆ ನೀವುಗಳು ಬಿಟ್ಟರೇ ತಾನೇ ...

ಇನ್ನು ಮುಂದೆ ಮಹಿಳಾ ದಿನ, ದಿನಾ ದಿನಾ!!! ಮಹಿಳಾ ಪ್ರಪಂಚಕ್ಕೆ ಜೈ ಜೈ ▪

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ಐದು ಪದ/ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

1. ಸಂಜೆಯ ವೇಳೆ ಕೊಳದ ಬಳಿ ಇದನ್ನು ಊದುತ್ತಾ ನಡೆಯ ಬೇಡಿ

		ರಿ

2. ಸೀತೆಯ ಪತಿಯೊಡನೆ ಪ್ರಾಸವಾಗುವ ತರಲೆ ಬುದ್ದಿ

		ಪ	

3. ಸ್ವಾದಿಷ್ಟವಾದ ಕುರುಕಲು ತಿಂಡಿಗೆ ತುಪ್ಪದ ಮೂಲವನ್ನು ಮುರಿಯಬೇಕೆ?

	ಣ್ಣೆ			ಕು

4. ರಾತ್ರಿಯ ವೇಳೆ ಮಕ್ಕಳು ಮಲಗಲು ಗಲಾಟೆ ಮಾಡಿದರೆ ಅಮ್ಮ ಕರೆಯುವುದು ಯಾರನ್ನು?

5. ಒಳಗೆ ಬರಲಪ್ಪಣೆ ಕೇಳುವ ಬಳೆಗಾರ

		ಯ್ಯ

ಮೇಲಿನ ಆಯ್ದ ಅಕ್ಷರಗಳನ್ನು ಸೇರಿಸಿ ಕೆಳಗಿನ ವಾಕ್ಯಕ್ಕೆ ಅರ್ಥ ಕೊಡುವ ಉತ್ತರ ಹುಡುಕಿ

ಉತ್ತರ - ಕನ್ನಡ ನಾಡಿನ ಕೀರ್ತಿ ಪತಾಕೆಯನ್ನು ಹಾರಿಸಿದ ವೀರ ಮಹಿಳೆ

ನಿಮ್ಮ ಉತ್ತರ ಈಮೈಲ್ ಮಾಡಿ, (horanadachilume@gmail.com)

ಮಾರ್ಚ್ 25 ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಫೆಬ್ರವರಿ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಉತ್ತರಿಸಿದ ಅನೇಕ ಜನರಿಗೆ ನಮ್ಮ ಧನ್ಯವಾದಗಳು. ಅವರ ಪೈಕಿ ಎಲ್ಲಾ ಸರಿ ಉತ್ತರ ಕಳುಹಿಸಿರುವ ಇವರಿಗೆ ನಮ್ಮ ಅಭಿನಂದನೆಗಳು.

- ಸುಮ ಅಶೋಕ್, ಸಿಡ್ನಿ
- ಶ್ರೀಧರ್ ಬಾಣಸಂದ್ರ, ಕ್ಯಾನ್ಬೆರ
- ರಾಘವೇಂದ್ರ ಮೂರ್ತಿ, ಬೆಂಗಳೂರು
- ಬಿ.ಆರ್. ವತ್ಸಲ ದ್ವಾರಕನಾಥ್ , ಕೆ.ಜಿ.ಎಫ್
- ರಾಜಿ ಜಯದೇವ್, ಸಿಡ್ನಿ
- ನರೇನ್ ಕುಮಾರ್, ಸಿಡ್ನಿ
- ಅಪರ್ಣ. ವೈ, ಸಿಡ್ನಿ
- ಮಂಜುನಾಥ್ ಯಳಂದೂರು
- ಕುಸುಮ ಚೇತನ್
- ಅನು ಶಿವರಾಂ
- ಆಶಾ ಫಣಿರಾಜ್, ಬೆಂಗಳೂರು
- ಗೀತ ಪ್ರಸಾದ್, ಅಡಿಲೇಡ್
- ನವ್ಯ ಪಿ

ಫೆಬ್ರವರಿ ತಿಂಗಳ ಪದಪುಂಜ

1. ಕದಲ ಚಿಪ್ಪಿನೊಳಗಿನ ಮಣಿಯಂಥಹ ಅಣ್ಣನ ಹೆಂಡತಿ

ಮು	ತ್ತಿ	ನಂ	ಥ	ಅ	ತ್ತಿ	ಗೆ

2. ಪ್ರಿಯತಮೆಯ ಸಮೇತ ಮಾಲಿನಲ್ಲಿ ಗೋಪಾಲನಾಗಿ ಅನಂತನಾಗ್ ಮಾಡಿದ್ದೇನು?

ಗೋ	ಲ್	ಮಾ	ಲ್	ರಾ	ಧ	ಕೃ	ಷ್ಣ

3. ಗೋಲ್ಡನ್ ಸ್ಟಾರ್ ಗಣೇಶನ ಚಿತ್ರದಲ್ಲಿ ಎರಡು ನದಿಗಳ ಮಿಲನವಾದೀತೆ?

ಸಂ	ಗ	ಮ

4. ರೂಪಿಣಿಯೊಡನೆ ಅಂಬರೀಷ್ ತುಳಿದ ಹೆಜ್ಜೆಗಳು

ಸ	ಪ್ತ	ಪ	ದಿ

5. ಚೋಮನದುಡಿಯನ್ನು ಬಾರಿಸಿ ರಾಷ್ಟ್ರಪ್ರಶಸ್ತಿ ಪಡೆದವರು ಯಾವ ರಾಯರು?

ವಾ	ಸು	ದೇ	ವ	ರಾ	ವ್

ಮೇಲಿನ ಆಯ್ದ ಅಕ್ಷರಗಳನ್ನು ಸೇರಿಸಿ ಕೆಳಗಿನ ವಾಕ್ಯಕ್ಕೆ ಅರ್ಥ ಕೊಡುವ ಉತ್ತರ ಹುಡುಕಿ

ಉತ್ತರ - ಬಜಾರಿ ಮಂಜುಳಾ ತಂದೆಗೆ ಪುಂಡ ರಾಜ್ ಹೇಳಿದ್ದು ಹೀಗೆ

ಸಂ	ಪ	ತ್ತಿ	ಗೆ	ಸ	ವಾ	ಲ್

Educational, Legal, financial, Health, Reality management services
Liaison work, Tours & Travels
visit www.nriseva.in or contact
Singapore – Harish +6598691760
Canada – SowmyaKeshava – 00968-99226928
Australia – Nagendra A- 0061401193852
Contact Mr. Nagendra EMAIL 0401193852

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮ ಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪



ಚುಕ್ಕಿಗಳು - ೧೩- ೧

ರಚನೆ: ಪುಷ್ಪ ವೆಂಕಟೇಶ್

ನಾಗಶೈಲ ಕುಮಾರ್ ಭಾರತದಲ್ಲಿ ಕೈಗೊಂಡಿದ್ದ "ಸೈಕಲ್ ಪಯಣ" ದ ಅನುಭವ ಲೇಖನದ ಮುಂದಿನ ಕಂತು ...

ರಾಜಧಾನಿಯಲ್ಲಿ ರಾಜಭೋಗ: ದೆಹಲಿಯಲ್ಲಿ ನಮ್ಮಣ್ಣನ ಕಚೇರಿಯ ಅತಿಥಿ ಗೃಹದಲ್ಲಿ ಕೊಠಡಿಗಳನ್ನು ನಮಗಾಗಿ ಕಾದಿರಸಲಾಗಿತ್ತು ವಿದೇಶೀ ರಾಯಭಾರಿಗಳ ಬಂಗಲೆಗಳ ನಡುವಲ್ಲಿ, ಸದಾ ಬಂದೂಕುದಾರಿ ಸಿಪಾಯಿಗಳು ಕಾವಲಿರುತ್ತಿದ್ದ ಶ್ರೀಮಂತ ಬಡಾವಣೆಯಲ್ಲಿತ್ತು ಆ ಅತಿಥಿ ಗೃಹ. ಪಂಚತಾರಾ ಹೋಟಲ್ಲಿನಂತಿದ್ದ ಹವಾನಿಯಂತ್ರಿತ ಕೊಠಡಿ, ಸದಾ ಸೇವೆಗೆ ಸಿದ್ಧವಾಗಿರುತ್ತಿದ್ದ ಬಟ್ಲರ್, ನಾವು ಎಂದೂ ಕಂಡರಿಯದ ಅಧುನಿಕ ಸೌಲಭ್ಯಗಳು ನಮ್ಮನ್ನು ತಬ್ಬಿಬ್ಬುಗೊಳಿಸಿತ್ತು. ಅಷ್ಟೇ ಅಲ್ಲದೆ ನೀವು ಬರುವ ಸಮಯವನ್ನು ಮೊದಲೇ ಸರಿಯಾಗಿ ತಿಳಿಸಿದ್ದರೆ ಒಳ್ಳೆಯ ಸ್ವಾಗತ ನೀಡಬಹುದಿತ್ತು ಎಂದು ಅಲ್ಲಿದ್ದ ನಮ್ಮಣ್ಣನ ಕಚೇರಿಯಯವರುಗಳು ಬೇಜಾರು ಮಾಡಿಕೊಂಡರು. ಇಷ್ಟು ದಿನ ಸಿಕ್ಕಿದ್ದಕ್ಕೆ ನಾವು ಒಗ್ಗಿ ಕೊಳ್ಳಬೆಕಾಗಿತ್ತು, ಆದರೆ ಇಲ್ಲಿ ನಮಗೆ ಬೇಕಿದ್ದಕ್ಕಿಂತ ಹೆಚ್ಚಾಗೇ ಸಿಕ್ಕಿತ್ತು. ದೆಹಲಿ ಸೇರಿದ ಮೊದಲ ದಿನ ರಾತ್ರಿ ಇಬ್ಬರೂ ಸೇರಿ ಸುಮಾರು ೪೫ ಪತ್ರಗಳನ್ನು, ಮನೆಗೆ, ನೆಂಟರು, ಸ್ನೇಹಿತರುಗಳಿಗೆ ಬರೆದೆವು.

ಸರಿ ದೆಹಲಿಯನ್ನು ಸೈಕಲ್ ರಿಕ್ಷಾ, ನಮ್ಮದೇ ಸೈಕಲ್, ಆಟೋ, ಹೀಗೆ ಎಲ್ಲದರಲ್ಲೂ ಸುತ್ತಿದೆವು. ಅಲ್ಲಿನ ಪ್ರಮುಖ ಪ್ರೇಕ್ಷಣೀಯ ಸ್ಥಳಗಳನ್ನೆಲ್ಲಾ ನೋಡಿದೆವು. ನಮಗೆ ಎಲ್ಲಕ್ಕಿಂತ ಹೆಚ್ಚಾಗಿ ಮನಸೆಳೆದ ಜಾಗವೆಂದರೆ ಆಗ ಹೊಸದಾಗಿ ನಿರ್ಮಿತವಾಗಿದ್ದ ಬಹಾಯಿ ಅಥವಾ ಲೋಟಸ್ ಟೆಂಪಲ್. ಅಲ್ಲಿನ ಪ್ರಶಾಂತ ಪರಿಸರ, ಕೇವಲ ದೀಪವೊಂದೇ ಕೆಂದ್ರ ಬಿಂದುವಾಗಿ, ಜಾತಿಮತ ಅಂತಸ್ತುಗಳ ಭೇದಭಾವವಿಲ್ಲದ,ಆ ಪ್ರಾರ್ಥನಾ ಮಂದಿರ ನಿಜಕ್ಕೂ ಅದ್ವಿತೀಯ. ಮತ್ತೆ ದೆಹಲಿಯ ಬಿರ್ಲಾ ಲಕ್ಷ್ಮೀನಾರಾಯಣ ಮಂದಿರಕ್ಕೆ ಹೋದಾಗ ಅಲ್ಲಿದ್ದ ಪ್ರವಾಸೀ ಕಚೇರಿಯೊಂದರ ಜಾಹೀರಾತಿನಿಂದ ಆಕರ್ಷಿತರಾಗಿ, ಹರಿದ್ವಾರ, ಋಷಿಕೇಷಗಳ ಒಂದು ದಿನದ ಅನಿರೀಕ್ಷಿತ ಪ್ರವಾಸಕ್ಕೂ ಬಸ್ಸಿನಲ್ಲಿ ಹೋಗಿಬಂದೆವು. ಆ ಪ್ರವಾಸ ಮುಂದಿನ ಮತ್ತೊಂದು ಪ್ರಮುಖ ಪ್ರವಾಸಕ್ಕೆ ನಾಂದಿಯಾಗುತ್ತದೆಂದು ನಾನಂದು ಊಹಿಸಿರಲಿಲ್ಲ. ಹರಿದ್ವಾರದಲ್ಲಾದ ರೋಮಾಂಚನೀಯ ಅನುಭವವಂತೂ ವರ್ಣಿಸಲಸಾಧ್ಯ. ಅದನ್ನು ನನ್ನ ಈ ಲೇಖನ ಮಾಲೆಯ ಅರಂಭದಲ್ಲಿ ತಿಳಿಸಿದ್ದೇನೆ.

ಮಾಲೀಕರೊಡನೆ ಮುಖಾಮುಖಿ; ದೆಹಲಿಯಲ್ಲಿ ನಾನು ನಮ್ಮ ಕಾರ್ಖಾನೆಯ ಮಾರಾಟ ಕಚೇರಿಗೆ ಭೇಟಿ ಕೊಡೋಣವೆಂದು ಹೊರಟೆ. ಅಲ್ಲಿದ್ದವರೆಲ್ಲರೂ ಬಲು ಆದರದಿಂದ ಸ್ವಾಗತಿಸಿ ಮಾತನಾಡಿಸಿದರು. ಮತ್ತೆ ನೀವು ತುಂಬಾ ಒಳ್ಳೆಯ ಸಮಯಕ್ಕೇ ಬಂದಿದ್ದೀರ, ಈಗ ಬೆಂಗಳೂರಿನಿಂದ ಎಂ.ಡಿ. ಯವರು ಬರುತ್ತಿದ್ದಾರೆ ಅವರನ್ನು ಭೇಟಿ ಮಾಡಿ ಮಾತನಾಡಿಸಿ ಕೊಂಡು ಹೋಗಿ ಎಂದರು. ನನಗೆ ಗಾಬರಿಯಾಯಿತು, ಏಕೆಂದರೆ ನಾನು ಅಂತಹ ವಿಷಯಗಳಿಂದ ಯಾವತ್ತೂ ದೂರವೆ. "ಇಲ್ಲ ಇಲ್ಲ ಸಮಯವಾಗುತ್ತದೆ, ನಾನು ಹೊರಡುತ್ತೇನೆ, ಬೆಂಗಳೂರಿಗೆ ಹೋದ ನಂತರ ಮಾತನಾಡಿಸುತ್ತೇನೆ" ಎಂದೆ. "ಅಯ್ಯೋ ಬೆಂಗಳೂರಿನಲ್ಲಿ ಮಾತನಾಡಿಸುವುದು ಇದ್ದೇ ಇದೆ, ಈಗ ಮಾತನಾಡಿಸಿ, ಇನ್ನೇನು ಬಂದು ಬಿಡುತ್ತಾರೆ", ಎನ್ನುವಷ್ಟರಲ್ಲಿ ನಮ್ಮ ಕಂಪನಿಯ ಎಮ್.ಡಿ ಬಂದೇ ಬಿಟ್ಟರು. ಅತ್ತ ಇತ್ತ ನೋಡದೆ, ಸೀದ ತಮ್ಮ ಚೇಂಬರ್ ಗೆ ಹೋದರು. ನಾನು ಅಲ್ಲಿಂದ ಹೇಗಪ್ಪಾ ತಪ್ಪಿಸಿಕೊಳ್ಳುವುದು ಎಂದು ಚಡಪಡಿಸುತ್ತಿದ್ದೆ. ಅಷ್ಟರಲ್ಲೇ "ಎಂ.ಡಿ. ಅವರು ಕರೀತಾ ಇದ್ದಾರೆ ಬನ್ನಿ" ಎಂದಾಗ, ಬೆಂಗಳೂರಿನಲ್ಲಿ ಎಂದೂ ಮಾತನಾಡಿಸದ ಕಂಪನಿಯ ಮಾಲೀಕರು, ದೆಹಲಿಗೆ ನಾನು ಬಂದ ಸಮಯದಲ್ಲೇ ಬರಬೇಕೆ ..... ಎಂದುಕೊಳ್ಳುತ್ತಾ ಚೇಂಬರೊಳಗೆ ನಡೆದೆ. ಅವರೇನೋ ತುಂಬಾ ಒಳ್ಳೆಯವರೆ, ಆದರೆ ನನಗೆ ಮುಜುಗರವಷ್ಟೆ! ಅವರು ಆಂಧ್ರ ಕಡೆಯವರು, ಅವರ ಮಾತು ಒಂದು ರೀತಿಯಲ್ಲಿ ಒರಟಂತೆ ಕಂಡರೂ, ಅವರ ಶೈಲಿಯಷ್ಟೆ ಅದು.

"ಏನು ಬೆಂಗಳೂರಿಂದ ಸೈಕಲ್ ನಲ್ಲಿ ಬಂದಿದ್ದೀಯಂತೆ? ಯಾರ್ಜೊತೆ ಬಂದಿದ್ದೀಯ? ಅಲ್ಲಿ ನನಗ್ಯಾಕೆ ತಿಳಿಸಲಿಲ್ಲ ನೀನು?"

"ಅಣ್ಣನ ಜೊತೆ ಬಂದಿದ್ದೀನಿ ಸರ್, ಅಲ್ಲಿ ಜಿ.ಎಮ್ ಅವರಿಗೆ ತಿಳಿಸಿದ್ದೆ"

"ಸರಿ ಸರಿ ದಾರೀಲಿ ಏನೂ ತೊಂದ್ರೆ ಆಗಲಿಲ್ಲ ತಾನೇ"

"ಇಲ್ಲ ಸರ್".

ಹೀಗೆ ನಮ್ಮ ಮಾತುಕತೆ ಆರಂಭವಾಗಿತ್ತು. ನಂತರ ಕೂಲಂಕುಷವಾಗಿ ನನ್ನನ್ನೇ ದಿಟ್ಟಿಸಿ ನೋಡಿದರು. "ಏನು ಬುದ್ದಿ ಇಲ್ಲವಾ ನಿನಗೆ" ಎಂದರು. ನನಗೆ ಗಾಬರಿಯಾಯಿತು. ಏನೂ ಮಾತನಾಡದೆ ಅವರನ್ನೇ ನೋಡಿದೆ, "ಅಲ್ಲ ಕತ್ತಿನಲ್ಲಿ ಸರ ಹಾಕಿಕೊಂಡು ದೇಶನೆಲ್ಲಾ ಸುತ್ತುತ್ತಾ ಇದ್ದೀಯಲ್ಲ, ಯಾರಾದ್ರೂ ಅದಕ್ಕೋಸ್ಕರ ನಿನ್ನ ಹೊಡೆದು ಹಾಕ್ತಾರೆ, ಮೊದ್ಲು ಅದನ್ನ ಕತ್ತಿನಿಂದ ತೆಗಿ" ಎಂದರು, ತಲೆಯಾಡಿಸಿದೆ. "ಕನ್ನಡಕ ಇದೆಯಾ" ಎಂದರು, "ಹಾಕಲ್ಲ ಸಾರ್" ಎಂದೆ, "ಮತ್ತೆ ಸಾವಿರಾರು ಮೈಲಿ ಗಾಳಿ, ಬಿಸಿಲು, ಧೂಳು, ಎಲ್ಲಾದ್ರಲ್ಲು ಪ್ರಯಾಣ ಮಾಡ್ತೀಯ, ಒಂದು ಕೂಲಿಂಗ್ ಗ್ಲಾಸ್ ಹಾಕಬೇಕೂಂತ ಗೊತ್ತಾಗಲ್ಲೇನ್ ನಿಂಗೆ" ಎಂದರು, "ಗೊತ್ತಾಗಲಿಲ್ಲ ಸರ್" ಎಂದೆ. "ಊರಿಂದ ಹೊರಟ್ಮೇಲೆ ಮನೆಯವರ ಕೂಡ ಮಾತ್ನಾಡಿದ್ದೇನು" ಎಂದರು, "ಇಲ್ಲ ಸರ್ ನಮ್ಮನೆಯಲ್ಲಿ ಫೋನ್ ಇಲ್ಲ" ಎಂದೆ. ಕೂಡಲೇ ಟೇಬಲ್ ಮೇಲಿದ್ದ ಫೋನಿನಿಂದ ಬೆಂಗಳೂರಿನಲ್ಲಿ ನಮ್ಮ ಡಿಪಾರ್ಟ್ಮೆಂಟ್ ಗೆ ಫೋನ್ ಮಾಡಿದರು. "ಯಾರ ಜೊತೆ ಮಾತನಾಡುತ್ತೀಯ" ಎಂದು ಕೇಳಿ, "ಏ ಅಲ್ಲಿ ಆ ಗೋಪಾಲ್ ಇದ್ರೆ ಕರಿ, ಡೆಲ್ಲಿ ಇಂದ ನಾಗಶೈಲ ಮಾತ್ನಾಡ್ತಾನಂತೆ ಅಂತ್ ಹೇಳು" ಎಂದು ಹೇಳಿ ನನಗೆ ಫೋನ್ ಕೊಟ್ಟರು. ನಂತರ ಒಂದೈದು ನಿಮಿಷ ನನ್ನಪ್ರಯಾಣದ ವಿವರವನ್ನೆಲ್ಲಾ ತಿಳಿದುಕೊಂಡರು. ಇನ್ನು ಬರುತ್ತೇನೆ ಸರ್ ಎಂದು ಹೊರಟಾಗ, ಸರಿ ಎಂದವರು, ಒಂದು ನಿಮಿಷ ಇರು ಎಂದು ಹೇಳಿ ತಮ್ಮ ಪರ್ಸಿನಲ್ಲಿ ಇದ್ದಷ್ಟೂ ಹಣವನ್ನು ತೆಗೆದು ನನ್ನ ಕೈಗಿತ್ತರು. ನಾನು ಬೇಡ ಪರವಾಗಿಲ್ಲ ಎಂದರೂ ಬಿಡಲಿಲ್ಲ. "ಇರಲಿ ಇಟ್ಟುಕೋ, ಏನಾದರೂ ತುರ್ತು ಖರ್ಚಿಗೆ ಬೇಕಾಗಬಹುದು, ಇಲ್ಲವಾದರೆ ಈಗಲೇ ಹೋಗಿ ಒಂದು ಕೂಲಿಂಗ್ ಗ್ಲಾಸ್ ತೆಗೆದುಕೋ" ಎಂದರು. ನಾನು ಮತ್ತೆ ಪರವಾಗಿಲ್ಲ ಸಾರ್ ಎಂದಾಗ " ನೋಡೋ ಇಟ್ಕೊಂಡಿರು, ಅದ್ನ್ ನೀನು ಬಳಸದೆ ಇದ್ದರೆ ಬೆಂಗಳೂರಿಗೆ ಬಂದ ಮೇಲೆ ಹಿಂದಿರುಗಿಸು", ಎಂದರು. ನಾನು ಮತ್ತೆ ಮಾತನಾಡದೆ ಸರಿ ಎಂದೆ. ಅವರಿಗೂ, ಮತ್ತೆಲ್ಲರಿಗೂ ವಿದಾಯ ಹೇಳಿ ಹೊರಬಂದೆ.

ಮುಂದಿನ ಪುಟ ನೋಡಿ ...

ಎಮ್.ಡಿ ಯವರ ಅಂತಃಕರಣಕ್ಕೆ ಮನಸ್ಸು ಮೂಕವಾಗಿತ್ತು. ಇಂದಿಗೂ ಯೋಚಿಸುತ್ತೇನೆ, ಅಂದು ಅವರನ್ನು ಭೇಟಿಯಾಗದೆ ಬಂದಿದ್ದರೆ, ಎಂತಹ ಒಂದು ಒಳ್ಳೆಯ ಅವಕಾಶವನ್ನು ಕಳೆದು ಕೊಂಡಿರುತ್ತಿದ್ದೆ ಎಂದು. ಕಾಕತಾಳೀಯವೆಂದರೆ ಅದೇ ದಿನ ನಮ್ಮಣ್ಣನೂ ಅವರ ಕಚೇರಿಗೆ ಹೋದಾಗ ಬೆಂಗಳೂರಿನಿಂದ ಅವರ ಚೀಫ್ ಎಂಜಿನಿಯರ್ ಕೂಡ ಬಂದಿದ್ದು, ನಮ್ಮಣ್ಣನನ್ನು ಭೇಟಿಯಾಗಿದ್ದರು.
ಜನವರಿ ೧೨ ರಿಂದ ೧೬ ರವರೆಗೆ ದೆಹಲಿಯಲ್ಲಿ ಕಳೆದು ೧೭ ರ ಬೆಳಗ್ಗೆ ನಮ್ಮ ಹಿಮ್ಮುಖ ಪ್ರವಾಸವನ್ನು ಆರಂಭಿಸಿದೆವು. ನಮ್ಮಣ್ಣನ ದೆಹಲಿ ಕಚೇರಿಯ ಹಲವಾರು ಸ್ನೇಹಿತರು ಬೆಳಗ್ಗೆ ವಿಶ್ರಾಂತಿ ಗೃಹದ ಬಳಿ ಬಂದು ಶುಭ ಕೋರಿ ವಿದಾಯ ಹೇಳಿ ಬೀಳ್ಕೊಟ್ಟರು..

ಅಪರಿಚಿತ ಅಮಾಯಕನ ಪ್ರೀತಿ: ದೆಹಲಿಯಿಂದ ನಮ್ಮ ಮುಂದಿನ ಗುರಿ ಜಯಪುರ್. ಏರ್ ಪೋರ್ಟ್ ರಸ್ತೆಯಲ್ಲಿಯೇ ನಮ್ಮ ಪ್ರಯಾಣ ಸಾಗಿ, ರಸ್ತೆ ರನ್ ವೇಯಷ್ಟು ಸೊಗಸಾಗೇ ಇದ್ದರೂ, ಭೂತಾಕಾರದ ಲಾರಿಗಳು ನಮ್ಮನ್ನು ರಸ್ತೆಯಲ್ಲಿ ಇರಲು ಬಿಡದೆ ಚೂಪಾದ ಜಲ್ಲಿ ಕಲ್ಲುಗಳು ತುಂಬಿದ್ದ ರಸ್ತೆಯ ಬದಿಗೆ ತಳ್ಳುತ್ತಿದ್ದವು. ನಮ್ಮಣ್ಣ ಅವನ ಸೈಕಲ್ ಗೆ ಒಂದೇ ಸಲಕ್ಕೆ ನಾಲ್ಕು ಪಂಕ್ಚರ್ ಹಾಕಬೇಕಾಯಿತು.

ಸಂಚಾರಿ ಸೈಕಲ್ ಸರ್ಜನ್

ರಸ್ತೆಯಲ್ಲಿ ನಮ್ಮ ಜೊತೆಗೇ ಒಬ್ಬ ರೈತನಂತಿದ್ದ ವ್ಯಕ್ತಿ ಸೈಕಲ್ ಗೆ ನಾಲ್ಕು ಹಾಲಿನ ಕ್ಯಾನ್ ಗಳನ್ನು ಹಾಕಿಕೊಂಡು ಬರುತ್ತಿದ್ದ. ನಮ್ಮನ್ನು ಸುಮಾರು ಹೊತ್ತು ಗಮನಿಸುತ್ತಿದ್ದು, ನಿಧಾನವಾಗಿ ನಾವು ಎಲ್ಲಿಂದ ಬಂದಿರುವುದು, ಎಲ್ಲಿಗೆ ಹೋಗುತ್ತೀವಿ ಎಲ್ಲಾ ವಿಷಯಗಳನ್ನು ವಿಚಾರಿಸಿಕೊಂಡ. "ಬೆಂಗಳೂರೆಂದರೆ ಅದೆಲ್ಲಿದೆ? ದೊಡ್ಡ ಊರಾ, ಹಳ್ಳಿಯಾ?";ಎಂದೆಲ್ಲಾ ಕೇಳಿದ. ನಂತರ "ದೆಹಲಿ ಹೇಗಿದೆ ಸಾಬ್?" ಎಂದ. "ಓ ತುಂಬಾ ಚೆನ್ನಾಗಿದೆ, ನಮ್ಮ ಊರಿಗಿಂತ ತುಂಬಾ ದೊಡ್ಡದಿದೆ" ಎಂದೆ. "ಹೌದಾ?" ಎಂದು ಆಶ್ಚರ್ಯ ತೋರಿಸಿದ. ನನಗ್ಯಾಕೋ ಅನುಮಾನವಾಗಿ, "ನೀನು ಆಗಾಗ್ಗೆ ದೆಹಲಿಗೆ ಹೋಗುತ್ತಿರುತ್ತೀಯ?" ಎಂದು ಕೇಳಿದೆ. ಅವನು ನಿಟ್ಟುಸಿರಿಟ್ಟು ನಮಗೆಲ್ಲಿಯ ದೆಲ್ಲಿ ಸಾಬ್, ಅದೇನಿದ್ದರೂ ದೊಡ್ಡ ಜನಗಳಿಗೆ ಮಾತ್ರ, ನಾನು ಒಮ್ಮೆಯೂ ದೆಹಲಿಗೆ ಹೋಗಿಲ್ಲ" ಎಂದ.
ನನಗೆ ನಂಬಲಾಗಲಿಲ್ಲ, ನಾವು ಎರಡು ಸಾವಿರ ಕಿಲೋಮೀಟರ್ ಗಿಂತಲೂ ಹೆಚ್ಚಿನ ದೂರದಿಂದ ದೆಹಲಿ ನೋಡಲು ಬಂದಿದ್ದೇವೆ, ಆದರೆ ಕೇವಲ ಮೂವತ್ತು ಕಿಮೀ ದೂರದಲ್ಲಿರುವ ಇವನು ದೆಹಲಿ ನೋಡಿಲ್ಲವೆಂದರೆ, ಅದೂ ಅವನಿಗೂ ಆಗಲೇ ಮುವ್ವತ್ತು ವರ್ಷಗಳೇ ಆಗಿರಬಹುದು. "ಸಾಬ್ ನಮ್ಮ ಮನೆಗೆ ಬಂದು ತಿಂಡಿ ತಿಂದುಕೊಂಡು ಹೋಗಿ" ಎಂದು ಹೇಳಿದ, "ಇಲ್ಲಪ್ಪ, ನಮಗೆ ಹೊತ್ತಾಗಿ ಬಿಡುತ್ತದೆ, ಕತ್ತಲಾಗುವುದರೊಳಗೆ ಮುಂದಿನ ಊರು ಸೇರಿಕೊಳ್ಳಬೇಕು" ಎಂದೆವು. ಸರಿ, ಮುಂದೆ ಹೆದ್ದಾರಿ ಕವಲಾಗಿತ್ತು, ಎರಡು ಭಾಗವೂ ದೊಡ್ಡದಾಗೇ ಇತ್ತು. ಅದು ಬೈಪಾಸ್ ನಂತಿದ್ದು ಯಾವುದೇ ಸೂಚನೆ ಇರಲಿಲ್ಲ. ಜೈಪುರ್ ಗೆ ಯಾವ ಕಡೆ ಹೋಗಬೇಕು ಎಂದು ಅವನನ್ನೇ ಕೇಳಿದೆವು. "ನಾನು ಹೋಗುವ ದಾರಿಯೇ ಸಾಬ್, ನನ್ನನ್ನು ಹಿಂಬಾಲಿಸಿ" ಎಂದು ಮಾತನಾಡಿಕೊಂಡು ಹಾಗೇ ಮುಂದೆ ಸಾಗಿದ. ಸ್ವಲ್ಪ ದೂರ ಸಾಗಿದ ಮೇಲೆ ನಮಗ್ಯಾಕೋ ಅನುಮಾನ ಬಂತು, ಇದೂ ಹೆದ್ದಾರಿಯಂತೇ ಇದ್ದರೂ, ದೊಡ್ಡ ದೊಡ್ಡ ಗಾಡಿಗಳ್ಯಾವುದೂ ಈ ರಸ್ತೆಗೆ ಬರುತ್ತಿರಲಿಲ್ಲ. ಹಾಗೇ ಮೆನೆಗಳೂ ಒತ್ತಾಗಿ ಸಿಗತೊಡಗಿದವು.

ಹೀಗೂ ಇತ್ತೇ ದೆಹಲಿ

ಅವನು ಒಂದು ಮನೆಯ ಮುಂದೆ ನಿಲ್ಲಿಸಿ "ಇದೇ ನನ್ನ ಮನೆ, ದಯವಿಟ್ಟು ಬಂದು ತಿಂಡಿ ತಿಂದುಕೊಂಡು ಹೋಗಿ, ನೀವು ಆ ರಸ್ತೆಯಲ್ಲೂ ಹೋಗಬಹುದಿತ್ತು, ಆದರೆ ನೀವು ನಮ್ಮ ಮನೆಗೆ ಬರದೆ ಹೋಗುತ್ತೀರಲ್ಲ ಎಂದು ನಾನು ನಿಮ್ಮನ್ನು ಈ ಕಡೆ ಕರೆದುಕೊಂಡು ಬಂದೆ, ಕ್ಷಮಿಸಿ ಸಾಬ್" ಎಂದಾಗ ನಾವು ಅವನ ಮಗ್ಧ ಪ್ರೀತಿಗೆ ಬೆರಗಾಗಿದ್ದೆವು.

ಮನಮೋಹಕ ರಾಜಾಸ್ಥಾನ: ಜೈಪುರ ದಲ್ಲಿ ನಮ್ಮ ಮುಂದಿನ ನಿಲುಗಡೆ. ಜೈಪುರ ಬರೀ ಮನಮೋಹಕವಷ್ಟೇ ಅಲ್ಲ, ವರ್ಣರಂಜಿತ ಕೂಡ. ಬಣ್ಣ ಬಣ್ಣದ ವೇಷ ಭೂಷಣಗಳು ಒಂದೆಡೆಯಾದರೆ ಕಣ್ಣು ಕೋರೈಸುವ ಬಟ್ಟೆ, ಬಳೆ, ಒಡವೆಗಳು ಮತ್ತು ಸಿಹಿ ತಿಂಡಿಗಳ ಅಂಗಡಿಗಳು ಸಾಲು ಸಾಲು. ವ್ಯಾಪಾರ ಪ್ರಿಯರಿಗಂತೂ (ನನ್ನಂಥಹ) ಸ್ವರ್ಗ.
ಮನೆಯವರೆಲ್ಲರಿಗೂ ಸೀರೆಗಳು, ಶಾಲು ಮುಂತಾಗಿ ಸಾಕಷ್ಟು ವ್ಯಾಪಾರ ಮಾಡಿದೆವು. ಇನ್ನು ಜೈಪುರದ ಅರಮನೆ, ಬೆಟ್ಟದ ಮೇಲಿನ ಅರಮನೆ, ಭವ್ಯವಾದ ಮಹಲ್ ಗಳು, ಜಗತ್ಪ್ರಸಿದ್ಧ ಹವಾಮಹಲ್ ಎಲ್ಲವೂ ನಗರವನ್ನು ವೈಭವಯುತವಾಗಿಸಿತ್ತು. ಅಲ್ಲಿ ಹೊಸದಾಗಿ ಕಟ್ಟಿಸಿದ್ದ ಅರಮನೆಯಂತೆಯೇ ಇದ್ದ "ರಾಜ್ ಮಂದಿರ್" ಎಂಬ ಚಿತ್ರಮಂದಿರದಲ್ಲಿ "ನ್ಯೂ ಡೆಲ್ಲಿ" ಎಂಬ ಹಿಂದಿ ಸಿನೆಮಾ ಕೂಡ ನೋಡಿದೆವು. ಜೈಪುರದಿಂದ ಮುಂದಿನ ಪ್ರಯಾಣ ಉದಯಪುರದೆಡೆಗೆ. ರಾಜಾಸ್ಥಾನವಾದ್ದರಿಂದ ನಾವು ಎಲ್ಲಾದರೂ ಮರಳುಗಾಡನ್ನು ಕಾಣುತ್ತೇವೇನೋ ಎಂದು ಕಾತರದಿಂದಿದ್ದೆವು. ಆದರೆ ಬರೀ ಗುಡ್ಡಗಾಡಷ್ಟೇ ಸಿಕ್ಕಿದ್ದು. ದೆಹಲಿ ಬಿಟ್ಟಾಗಿನಿಂದಲೂ ನಮ್ಮ ಜೊತೆಗೇ ಬರುತ್ತಿದ್ದ ಬೆಟ್ಟಗಳ ಸಾಲೇ "ಅರಾವಳೀ ಪರ್ವತಗಳು", ಎಂದು ನಾನು ಶಾಲೆಯಲ್ಲಿ ಹಿಂದೆ ಓದಿದ್ದನ್ನು ನೆನಪಿಸಿಕೊಂಡೆ.

ರಾಜ್ ಮಂದಿರ್ ಚಿತ್ರಮಂದಿರ

ಮುಂದಿನ ಪುಟ ನೋಡಿ ...

ಜೈಪುರದ ಅಂಬರ್ ಪ್ಯಾಲೇಸ್

ಇತಿಹಾಸ ಹಾಗೂ ಧಾರ್ಮಿಕ ಪ್ರಸಿದ್ಧ ಅಜ್ಮೀರ್ ಮೂಲಕ ನಮ್ಮ ಪ್ರಯಾಣ ಸಾಗಿತ್ತು. ರಾಜಾಸ್ಥಾನದ ಪ್ರಯಾಣದಲ್ಲಿ ಎರಡು ಪ್ರಮುಖ ಅಂಶಗಳೆಂದರೆ ಏರು ತಗ್ಗುಗಳ ಹಾದಿಯುದ್ದಕ್ಕೂ ಅರಾವಳಿಯ ಕಣ್ಮನ ತಣಿಸುವ ದೃಶ್ಯಾವಳಿ, ಮತ್ತು ತಿಂದಷ್ಟೂ ಬೇಕೆನಿಸುವ, ರುಚಿ ರುಚಿಯಾದ ಸಿಹಿ ತಿಂಡಿಗಳು. ಎಷ್ಟೇ ಸಿಹಿತಿಂಡಿಯನ್ನಾಗಲೀ ಏನೇ ಆಗಲೀ ತಿಂದದ್ದೆಲ್ಲಾ, ಮತ್ತೆ ಗಂಟೆಯೊಳಗೆ ಅರಗಿ ಹೋಗಿರುತ್ತಿತ್ತು. ಒಂದು ಕಡೆಯಂತೂ ಪೆಡಲ್ ಮಾಡದೆಯೇ ಸುಮಾರು ಮುವ್ವತ್ತು ಕಿಲೋಮೀಟರ್ ಗಳಷ್ಟು ದೂರ ಹಸಿರಾದ, ಸುಂದರವಾದ ಕಣಿವೆ ಪ್ರದೇಶದಲ್ಲಿ ಸಾಗಿದೆವು. ಆಗ ಪ್ರಸಿದ್ಧ ಕ್ಷೇತ್ರ ಮೌಂಟ್ ಅಬುವಿಗೆ ಬಹಳಷ್ಟೇ ಹತ್ತಿರದಲ್ಲಿದ್ದರೂ, ಸಮಯಾಭಾವದಿಂದ ಹೋಗಲಾಗಲಿಲ್ಲ.

ಹಾಗೇ ಶ್ರೀನಾಥಜಿ ಎಂದು ಕರೆಯಲ್ಪಡುವ ಕೃಷ್ಣನ ದೇವಾಲಯವಿರುವ ನಾಥದ್ವಾರ ಮತ್ತು ಸುಂದರವಾದ ಏಕಲಿಂಗಜಿ, ಎಂಬ ದೇವಾಲಯಗಳಿಗೂ ಹೋಗಲಾಗಲಿಲ್ಲ. ಅರಾವಳಿಯನ್ನು ಗುಜರಾತಿನೆಡೆಗೆ ಕಳಿಸಿಕೊಟ್ಟು ನಾವು ಮತ್ತೊಂದು ಸುಂದರ ನಗರ ಉದಯಪುರವನ್ನು ಸುಂದರ ಸಂಧ್ಯಾ ಸಮಯದಲಿ ಪ್ರವೇಶಿಸಿದೆವು.

ಮುಂದಿನ ಸಂಚಿಕೆಯಲ್ಲಿ; ನಮ್ಮ ಮುಂದೆ ಗೋಡೆಯಂತೆ ಅಡ್ಡಲಾಗಿ ಬೆಟ್ಟವೊಂದು ಎದ್ದು ನಿಂತಿತ್ತು. ಆ ಬೆಟ್ಟವನ್ನು ಹತ್ತುತ್ತಿದ್ದ ದೊಡ್ಡ ದೊಡ್ಡ ಲಾರಿಗಳು ಗೋಡೆಯ ಮೇಲೆ ನಿಧಾನವಾಗಿ ತೆವಳುತ್ತಿರುವ ಹಲ್ಲಿಗಳಂತೆ ಕಾಣುತ್ತಿದ್ದವು, ಸರಿ ಇದನ್ನೇರುವುದೂ ಒಂದು ರೀತಿಯ ಸವಾಲೇ ಎನ್ನುತ್ತ ಯುದ್ಧಕ್ಕೆ ಸಿದ್ಧರಾದವರಂತೆ ಮುನ್ನಡೆದೆವು...

ಜಾಣ ಕರ್ನಾಟಕ – ಉತ್ತರ

೧. ೧೦೨ನೇ ಹುಟ್ಟು ಹಬ್ಬ, ೨೮೪

೨ ಕೃಪಾಕರ-ಸೇನಾನಿ, ೧೪ ದಿನಗಳು

ಸಿಡ್ನಿಯಲ್ಲಿ ಕನ್ನಡ ಚಲನ ಚಿತ್ರ

ವಿಜ್ಞಾನ

ನಾಡಿಮಿಡಿತ

ಸಂಕಲನ: ಬದರಿ ತ್ಯಾಮಗೊಂಡ್ಲು

ಮಾನವನ ನಾಡಿಮಿಡಿತವನ್ನು ಈ ಸರಳ ಪ್ರಯೋಗದಿಂದ ದೃಶ್ಯೀಕರಿಸಬಹುದು (Visualize) !

ಬೇಕಾಗುವ ಸಾಮಾನು:

ಡ್ರಾಯಿಂಗ್ ಪಿನ್, ಬೆಂಕಿ ಕಡ್ಡಿ

ವಿಧಾನ

ಬೆಂಕಿಕಡ್ಡಿಯ ಬುಡಕ್ಕೆ ಒಂದು ಡ್ರಾಯಿಂಗ್ ಪಿನ್ ಚುಚ್ಚಿರಿ.

ಇದನ್ನು, ನಿಮ ಕೈನ ಮಣಿಕಟ್ಟಿನ (wrist) ಜಾಗದಲ್ಲಿ ಸಮತೋಲನ ಬರುವಂತೆ ನಿಲ್ಲಿಸಿ.

ಸಮತೋಲನ ಬರಲು ನಿಮ್ಮ ಕೈಯನ್ನು ಒಂದು ಬೆಂಚಿನ ಮೇಲೆ ಇಡಬಹುದು.

ನಿಧಾನವಾಗಿ ಗಮನಿಸಿದಾಗ ಬೆಂಕಿಕಡ್ಡಿ ಅತ್ತಿಂದಿತ್ತ ವಾಲುವುದನ್ನು ಕಾಣಬಹುದು.



ನಾಡಿಮಿಡಿತ ಏಕೆ ?

ಹೃದಯದ ಎದೆಬಡಿತ ದೇಹದ ಅಪಧಮನಿ ವ್ಯವಸ್ಥೆಯಲ್ಲಿ (arterial system) ನಾಡಿಮಿಡಿತವನ್ನು (pulse) ತರುತ್ತದೆ. ಇದನ್ನು sthethoscope ಮೂಲಕವೂ ಕೇಳಿಸಿಕೊಳ್ಳಬಹುದು. ಮನೆಯಲ್ಲಿ ಮೇಲೆ ತಿಳಿಸಿದ ಸುಲಭ ಮಾರ್ಗದಿಂದ ನೋಡಬಹುದು ▪

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ವಸುಂಧರ - ಕನ್ನಡ ಚಲನಚಿತ್ರ

Hurstville Civic Theatre

March 22nd 2014
1:30 PM and 3:30 PM

For Tickets contact:
Narayan – 0423434979, JP – 0411115885
Balaji – 0422164480, Shiva Shankar - 0410568021

Bharatiya Vidya Bhavan Australia

Holi mahotsav

Darling Harbour Sydney
21st to 23rd March 2014

www.holimahotsav.com.au
Contact 1300BHAVAN (1300 242 826)

ಸಿಡ್ನಿ ಕನ್ನಡ ಶಾಲೆಯ ಆಶ್ರಯದಲ್ಲಿ
ಯುಗಾದಿ ಹಬ್ಬ ಸಾಂಸ್ಕೃತಿಕ ಸಂಜೆ

ಮಕ್ಕಳು ಹಾಗೂ ಹಿರಿಯರಿಂದ ಮನರಂಜನೆ ಕಾರ್ಯಕ್ರಮ

ದಿನಾಂಕ 03-05-2014

WattleGrove Public school, Cressbrook drive,
Wattlegrove
NSW 2171

ನಮ್ಮ
ಸುತ್ತಾ
ಮುತ್ತಾ

3rd Australian National Hindu Conference

Sat & Sun 26-27 April 2014
8:30 AM - 5:30 PM

Workshops, networking and discussions.
Organised by Vishva Hindu Parishad of Australia Inc.

Both Day Registration Fee: $50
Details: www.vhp.org.au or email:
conference@vhp.org.au

ಈ ಸಂಚಿಕೆ ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.